ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಮೇ 16, 2024

ಸಂಪುಟ : 51 ಸಂಚಿಕೆ : 02 ☎ 08192-254736 91642 99999 RNI No: 27369/75 ಪುಟ : 6 ರೂ : 5.00 www.janathavani.com janathavani@mac.com




## ಇನ್ನೂ ವಾಪಸ್ಸಾಗದ ಪ್ರಜ್ವಲ್



ಬೆಂಗಳೂರು, ಮೇ 15 - ಲೈಂಗಿಕ ದೌರ್ಜನ್ಯ ಆರೋಪ ಹೊತ್ತಿರುವ ಸಂಸದ ಪ್ರಜ್ವಲ್ ರೇವಣ್ಣ ರಾಷ್ಟ್ರಕ್ಕೆ ಬುಧವಾರ ಹಿಂದಿರುಗಲಿದ್ದಾರೆ ಎಂಬುದು ಮತ್ತೊಮ್ಮೆ ಹುಸಿಯಾಗಿದೆ.

ಜರ್ಮನಿಯ ಮ್ಯೂನಿಚ್ ವಿಮಾನ ನಿಲ್ದಾಣದಿಂದ ಬೆಂಗಳೂರಿಗೆ ಭಾರತೀಯ ಕಾಲಮಾನ ಬುಧವಾರ ಸಂಜೆ 4.05ಕ್ಕೆ ಹೊರಟು, ಗುರುವಾರ ಬೆಳಗ್ಗೆ 00.45ಕ್ಕೆ ನೇರವಾಗಿ ತಲುಪುವ ವಿಮಾನದಲ್ಲಿ ಟಿಕೆಟ್ ಕಾಯ್ದಿರಿಸಲಾಗಿತ್ತು.

ಪ್ರಜ್ವಲ್ ಜೊತೆಗೆ ಇನ್ನೂ ಏಳು ಮಂದಿಯ ಹೆಸರಿನಲ್ಲಿ ಟಿಕೆಟ್ ನೋಂದಾಯಿಸಲಾಗಿತ್ತು. ಆದರೆ, ಪ್ರಜ್ವಲ್ ಕೊನೆ ಗಳಿಗೆಯಲ್ಲಿ ತಮ್ಮ ನಿರ್ಧಾರವನ್ನು ಬದಲಿಸಿದ್ದಾರೆ. ಈ ಹಿಂದೆ ಎರಡು ಬಾರಿ ಇದೇ ರೀತಿ ರಾಷ್ಟ್ರಕ್ಕೆ ಹಿಂತಿರುಗುವ ನಿರ್ಧಾರವನ್ನು ಪ್ರಜ್ವಲ್ ಬದಲಿಸಿದ್ದರು.

ಆದರೆ, ಇಂದು ನಗರಕ್ಕೆ ಪ್ರಜ್ವಲ್ ಬಂದೇ ಬರುತ್ತಾರೆ ಎಂಬ ಖಚಿತ ಮಾಹಿತಿ ಹಿನ್ನೆಲೆಯಲ್ಲಿ ಎಸ್‌ಐಟಿ ಅಧಿಕಾರಿಗಳು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಂದು ಬೆಳಗ್ಗೆಯಿಂದಲೇ ಮೊಕ್ಕಾಂ ಹೂಡಿದ್ದರು.

ಎಸ್‌ಐಟಿಯ ಆರು ಅಧಿಕಾರಿಗಳ ತಂಡ ಜರ್ಮನಿಯಲ್ಲಿ ಬಿಡಾರ ಹೂಡಿ ಪ್ರಜ್ವಲ್ ಅವರ ಮನವೊಲಿಸಿ ಕರೆತರುವ ಪ್ರಯತ್ನ ನಡೆಸಿದ್ದಾರೆ. (2ನೇ ಪುಟಕ್ಕೆ)

## ಅಕ್ರಮ ಹಣ : ಜಾರ್ಖಂಡ್ ಸಚಿವ ಅಲಂ ಬಂಧನ



ರಾಂಚಿ, ಮೇ 15 – ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರ್ಖಂಡ್ ಸಚಿವ ಆಲಂಗೀರ್ ಆಲಂ ಅವರನ್ನು ಜಾರಿ ನಿರ್ದೇಶನಾಲಯ ಬಂಧಿಸಿದೆ. ಆಲಂ ಅವರ ಸಹಾಯಕನಿಗೆ ಸಂಬಂಧಿಸಿದ ತಾಣದಲ್ಲಿ ಭಾರೀ ಪ್ರಮಾಣದ ಹಣ ಪತ್ತೆಯಾಗಿತ್ತು.

ಅಕ್ರಮ ಹಣ ಪ್ರಕರಣದಲ್ಲಿ ಅವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಲಾಗಿದೆ. ಇತ್ತೀಚೆಗೆ ಅವರ ಆಪ್ತ (2ನೇ ಪುಟಕ್ಕೆ)

## ಸ್ಲೋವೇಕಿಯಾ ಪ್ರಧಾನಿ ಮೇಲೆ ಗುಂಡಿನ ದಾಳಿ



ಪ್ರೇಗ್, ಮೇ 15 – ಸ್ಲೋವೇಕಿಯಾದ ಪ್ರಧಾನ ಮಂತ್ರಿ ರಾಬರ್ಟ್ ಫಿಕೊ ಅವರ ಮೇಲೆ ಗುಂಡಿನ ದಾಳಿ ನಡೆಸಲಾಗಿದ್ದು, ಅವರ ಪರಿಸ್ಥಿತಿ ಚಿಂತಾಜನಕವಾಗಿದೆ. ಜನಪ್ರಿಯ ಹಾಗೂ ರಷ್ಯಾ ಪರ ನಾಯಕರಾಗಿರುವ ಫಿಕೊ (2ನೇ ಪುಟಕ್ಕೆ)

## ಐ.ಎನ್.ಡಿ.ಐ.ಎ. ಅಧಿಕಾರಕ್ಕೆ ಬಂದರೆ 10 ಕೆಜಿ ಧಾನ್ಯ

ಲಖ್ನೌ, ಮೇ 15 - ಕೇಂದ್ರದಲ್ಲಿ ಐ.ಎನ್.ಡಿ.ಐ.ಎ. ಮೈತ್ರಿಕೂಟ ಅಧಿಕಾರಕ್ಕೆ ಬಂದಲ್ಲಿ ಬಡವರಿಗೆ ಉಚಿತವಾಗಿ ನೀಡುತ್ತಿರುವ ಆಹಾರ ಧಾನ್ಯದ ಪ್ರಮಾಣವನ್ನು 10 ಕೆಜಿಗೆ ಹೆಚ್ಚಿಸಲಾಗುವುದು ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಿಳಿಸಿದ್ದಾರೆ. ಪ್ರಸಕ್ತ ಕೇಂದ್ರ ಸರ್ಕಾರ 5 ಕೆಜಿ ಧಾನ್ಯ ನೀಡುತ್ತಿದೆ. ಕಾಂಗ್ರೆಸ್ ಸರ್ಕಾರ ಇದ್ದಾಗ ಆಹಾರ ಖಾತ್ರಿ ಕಾಯ್ದೆ ಜಾರಿಗೆ ತಂದಿತ್ತು. ಪ್ರಧಾನ ಮಂತ್ರಿ ನರೇಂದ್ರ ಮೋದಿ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದು ಖರ್ಗೆ ಹೇಳಿದರು.

## ಸಿ.ಎ.ಎ. ಅನ್ವಯ 14 ಜನರ ಮೊದಲ ತಂಡಕ್ಕೆ ಪೌರತ್ವ


ನವದೆಹಲಿ, ಮೇ 15 - ಪೌರತ್ವ ತಿದ್ದುಪಡಿ ಕಾಯ್ದೆ (ಸಿ.ಎ.ಎ.) ಅನ್ವಯ 14 ಜನರ ಮೊದಲ ತಂಡಕ್ಕೆ ನಾಗರಿಕತೆ ನೀಡಲಾಗಿದೆ.

ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಕುಮಾರ್ ಭಲ್ಲ ಅವರು 14 ಜನರಿಗೆ ಪ್ರಮಾಣ ಪತ್ರಗಳನ್ನು ವಿತರಿಸಿದ್ದಾರೆ. (2ನೇ ಪುಟಕ್ಕೆ)

## ಏಪ್ರಿಲ್‌ನಲ್ಲಿ ಭಾರತದ ರಫ್ತು ಹೆಚ್ಚಳ

ನವದೆಹಲಿ, ಮೇ 15 – ಏಪ್ರಿಲ್ ತಿಂಗಳಲ್ಲಿ ಭಾರತದ ರಫ್ತು ಶೇ.1ರಷ್ಟು ಹೆಚ್ಚಾಗಿದ್ದು 34.99 ಶತಕೋಟಿ ಡಾಲರ್‌ಗಳಿಗೆ ತಲುಪಿದೆ. ಇದೇ ವೇಳೆ ವ್ಯಾಪಾರಿ ಕೊರತೆ ನಾಲ್ಕು ತಿಂಗಳಲ್ಲೇ ಅತಿ ಹೆಚ್ಚಿನ 19.1 ಶತಕೋಟಿ ಡಾಲರ್‌ಗಳಿಗೆ ತಲುಪಿದೆ. ಎಲೆಕ್ಟ್ರಾನಿಕ್ಸ್, ರಾಸಾಯನಿಕ, ಪೆಟ್ರೋಲಿಯಂ ಹಾಗೂ ಔಷಧ ಉತ್ಪನ್ನಗಳ ಮಾರಾಟದಲ್ಲಿ ಹೆಚ್ಚಳವಾಗಿದೆ. ಆಮದು ಶೇ.10.25ರಷ್ಟು ಹೆಚ್ಚಾಗಿ 54.09 ಶತಕೋಟಿ ಡಾಲರ್‌ಗಳಿಗೆ ತಲುಪಿದೆ.

## ಬಿಎಸ್‌ವೈಗೆ ಪೋಕ್ಸೋ ಕಾಟ : ಬಂಧನದ ಸಾಧ್ಯತೆ



ಬೆಂಗಳೂರು, ಮೇ 15 - ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನದ ಭೀತಿಯಲ್ಲಿದ್ದಾರೆ.

ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಸಂತ್ರಸ್ತೆ ಅಪಹರಣ ಪ್ರಕರಣದಲ್ಲಿ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಬಂಧನಗೊಂಡು ಬಿಡುಗಡೆಯಾದ ಬೆನ್ನಲ್ಲೇ ಸರ್ಕಾರಕ್ಕೆ ಮತ್ತೊಂದು ತಲೆನೋವು ಎದುರಾಗಿದೆ.

ಪೋಕ್ಸೋ ಪ್ರಕರಣದ ತನಿಖೆ ನಡೆಸು ತ್ತಿರುವ ಸಿಐಡಿ ಅಧಿಕಾರಿಗಳು ಈಗಾಗಲೇ ಎಫ್‌ಐಆರ್ ದಾಖಲಿಸಿ ಪ್ರಾಥಮಿಕ ಹಂತದ ತನಿಖೆ ಮುಗಿಸಿ, ಈಗ ಆರೋಪ ಪಟ್ಟಿ ಸಲ್ಲಿಸಲು ಮುಂದಾಗಿದ್ದಾರೆ.

ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸುವುದಕ್ಕೂ ಮುನ್ನ ಯಡಿಯೂರಪ್ಪ ಅವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಬೇಕಾಗಿದೆ. ಇನ್ನೆರಡು ದಿನಗಳಲ್ಲೇ ಈ ಕಾರ್ಯ ಮುಗಿಯಬೇಕಿದೆ.


ಯಡಿಯೂರಪ್ಪ ಅವರನ್ನು ಬಂಧಿಸುವುದಕ್ಕೂ ಮುನ್ನ ಅಧಿಕಾರಿಗಳು ಮುಖ್ಯಮಂತ್ರಿ ಹಾಗೂ ಗೃಹ ಸಚಿವರ ಗಮನಕ್ಕೆ ವಿಷಯ ತಂದಿದ್ದಾರೆ. ತದನಂತರ ಸಿದ್ದರಾಮಯ್ಯ ಹಾಗೂ ಡಾ.ಪರಮೇಶ್ವರ್ ಅವರು ಚರ್ಚೆ ಮಾಡಿ, ಸರ್ಕಾರವನ್ನು ಮತ್ತೆ ಇಕ್ಕಟ್ಟಿಗೆ ಸಿಲುಕಿಸಬೇಡಿ ಎಂಬ ಕಿವಿಮಾತು ಹೇಳಿದ್ದಾರಂತೆ.

ರೇವಣ್ಣ ಪ್ರಕರಣದಿಂದ ಒಂದು ಸಮುದಾಯದ ವಿರೋಧ ಕಟ್ಟಿಕೊಂಡಿದ್ದೇವೆ, ಯಡಿಯೂರಪ್ಪ ಅವರನ್ನೂ ಬಂಧಿಸಿದರೆ ಆ ಸಮಾಜವೂ ತಿರುಗಿಬೀಳುತ್ತದೆ.

ನೀವು ಕಾನೂನು ರೀತಿ ಕ್ರಮ ಕೈಗೊಳ್ಳಿ, ಯಡಿಯೂರಪ್ಪ ನ್ಯಾಯಾಲಯದಲ್ಲಿ ಹೋರಾಟ ನಡೆಸಲಿ ಎಂಬ ಸಲಹೆ ನೀಡಿದ್ದಾರೆ ಎನ್ನಲಾಗಿದೆ.

ಸಹಾಯ ಕೇಳಲು ಹೋಗಿದ್ದ 17 ವರ್ಷದ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆಂದು ಅವರ ತಾಯಿ, ಸದಾಶಿವನಗರ ಠಾಣೆಯಲ್ಲಿ ದೂರು ನೀಡಿದ್ದರು. ಕಳೆದ ಫೆಬ್ರವರಿ 2ರಂದು ಯಡಿಯೂರಪ್ಪ ಅವರು ಬಾಲಕಿಯನ್ನು ಕೊಠಡಿಗೆ ಕರೆದೊಯ್ದು ಲೈಂಗಿಕ ಕಿರುಕುಳ ನೀಡಿದ್ದಾಗಿ ದೂರಿನಲ್ಲಿ ಆರೋಪಿಸಲಾಗಿತ್ತು. ದೂರು ನೀಡಿದ ನಂತರ ಮಕ್ಕಳ ಮೇಲಿನ ಲೈಂಗಿಕ ತಡೆ (ಪೋಕ್ಸೋ) ಕಾಯಿದೆ ಸೆಕ್ಷನ್ 8 ಹಾಗೂ ಐಪಿಸಿ ಸೆಕ್ಷನ್ 354 (ಎ) ಅಡಿ ಮಾರ್ಚ್ 14ರಂದು ಎಫ್‌ಐಆರ್ ದಾಖಲಾಗಿತ್ತು.

ಪ್ರಕರಣಕ್ಕೆ ಸಂಬಂಧಪಟ್ಟಂತೆ (2ನೇ ಪುಟಕ್ಕೆ)



# ಬಸವಣ್ಣ ಕಂಡ ಕನಸು ನನಸಾಗಿಸಲು ಬೀರದೇವರ ಸಹೋದರತ್ವ ಭಾವನೆ ಮಾದರಿ

ಮಲೇಬೆನ್ನೂರು, ಮೇ 15- ಬಸವಣ್ಣ ಕಂಡ ಕನಸು ನನಸಾಗಿಸಲು ಬೀರದೇವರ ಸಹೋದರತ್ವ ಭಾವನೆ ಮಾದರಿಯಾಗಿದೆ ಎಂದು ಕಾಗಿನೆಲೆ ಕನಕ ಗುರುಪೀಠದ ಹೊಸದುರ್ಗ ಶಾಖಾ ಮಠದ ಶ್ರೀ ಈಶ್ವರಾನಂದ ಪುರಿ ಸ್ವಾಮೀಜಿ ಹೇಳಿದರು.

ಅವರು, ಕುಣೆಬೆಳಕೆರೆ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಬೀರಲಿಂಗೇಶ್ವರ ಸಮುದಾಯ ಭವನ ಲೋಕಾರ್ಪಣೆ ಸಮಾರಂಭ ಉದ್ಘಾಟಿಸಿ ಆಶೀರ್ವಚನ ನೀಡಿದರು.

ಕುಣೆಬೆಳಕೆರೆ ಬೀರಪ್ಪ ಮತ್ತು ಮುಗಳಗೇರಿ ಬೀರಪ್ಪ ಅಣ್ಣ-ತಮ್ಮಂದಿರಾಗಿ ಅನ್ಯೋನ್ಯತೆಯಿಂದ ನಡೆದುಕೊಂಡು ಬಂದಿದ್ದಾರೆ. ಅವರಿಬ್ಬರೂ ಒಬ್ಬರನ್ನು ಬಿಟ್ಟು ಒಬ್ಬರೇ ಯಾವ ಕಾರ್ಯವನ್ನೂ ಮಾಡುವುದಿಲ್ಲ. ಇವರ ಈ ಸಹೋದರತ್ವ ಮತ್ತು ಒಗ್ಗಟ್ಟನ್ನು ನಾವು ನಮ್ಮ ಕುಟುಂಬಗಳಲ್ಲಿ ಅನುಸರಿಸಿದರೆ ಮತ್ಸರ, ಕಲಹಗಳಿಂದ ದೂರವಿರುವುದರ ಜೊತೆಗೆ ಸುಖೀ ಜೀವನ ಸಾಗಿಸಬಹುದೆಂದು ಶ್ರೀಗಳು ಭಕ್ತರಿಗೆ ತಿಳಿಸಿದರು.

ದೇವರುಗಳಲ್ಲಿರುವ ಒಗ್ಗಟ್ಟು ನಮ್ಮಲ್ಲಿ ಏಕೆ ಇಲ್ಲ? ಎಂದು ಪ್ರಶ್ನಿಸಿದ ಶ್ರೀಗಳು, ಬೀರದೇವರುಗಳ ಮೂಲಕ ಹಾಲುಮತ ಸಂಸ್ಕೃತಿ ಕೂಡಿ ಬಾಳುವುದನ್ನು ತೋರಿಸಿಕೊಟ್ಟಿದೆ. ಕೂಡಿ ಬಾಳುವುದರಲ್ಲಿರುವ ಸುಖ-ಸಂತೋಷ ಬೇರೆ ಯಾವುದರಲ್ಲಿಯೂ ಸಿಗುವುದಿಲ್ಲ. ಒಡೆದು ಹೋದ ಮನಸ್ಸುಗಳನ್ನು ಒಗ್ಗೂಡಿಸುವ ಶಕ್ತಿ ದೇವರಲ್ಲಿದ್ದು, ಕೂಡಿ ಬಾಳುವುದೇ ನಿಜವಾದ ಧರ್ಮವಾಗಿದೆ. ಇದನ್ನೇ ಕನಕದಾಸರು, ಬಸವಣ್ಣನವರು ತಮ್ಮ ವಚನಗಳಲ್ಲಿ ಹೇಳಿದ್ದಾರೆ ಎಂದರು.



## ಕುಣೆಬೆಳಕೆರೆ : ಸಮುದಾಯ ಭವನ ಲೋಕಾರ್ಪಣೆ ಸಮಾರಂಭದಲ್ಲಿ ಈಶ್ವರಾನಂದಪುರಿ ಸ್ವಾಮೀಜಿ

ಪ್ರಾಸ್ತಾವಿಕವಾಗಿ ಮಾತನಾಡಿದ ಗ್ರಾಮದ ಎಂ.ಸಿ. ಚಂದ್ರಶೇಖರ್ ಅವರು ಪೂಜಾರ್ ಕೆಂಗಸಿದ್ದಪ್ಪ ಮತ್ತು ಅಜ್ಜಪ್ಪ ಹಾಗೂ ಗ್ರಾಮಸ್ಥರ, ಭಕ್ತರ ಶ್ರಮದ ಪ್ರತಿಫಲವಾಗಿ ಈ ಬೃಹತ್ ಸಮುದಾಯ ಭವನ ನಿರ್ಮಾಣವಾಗಿದೆ. ಇದಕ್ಕೆ ಸರ್ಕಾರದ ಅನುದಾನವೂ ಸಿಕ್ಕಿದ್ದು, ಮಲೇಬೆನ್ನೂರಿನ ಕೆ.ಪಿ. ಸಿದ್ದಬಸಪ್ಪನವರ ಸಹಕಾರವೂ ಇದೆ. 2008ರಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ಎರಡು ಎಕರೆ ಜಾಗ ನಿಗದಿ ಮಾಡಲಾಗಿತ್ತು. ಎಂದು ಚಂದ್ರಶೇಖರ್ ಸ್ಮರಿಸಿದರು.

ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕರಾದ ಹೆಚ್.ಎಸ್. ಶಿವಶಂಕರ್, ಎಸ್. ರಾಮಪ್ಪ, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಜಿ.ಪಂ. ಮಾಜಿ ಅಧ್ಯಕ್ಷ ಹನಗವಾಡಿ ವೀರೇಶ್, ಜಿ.ಪಂ. ಮಾಜಿ ಸದಸ್ಯರಾದ ಎಂ. ನಾಗೇಂದ್ರಪ್ಪ, ಕೆಂಗಲಹಳ್ಳಿ ಗುರುಮೂರ್ತಿ, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ತಾ.ಪಂ. ಮಾಜಿ ಅಧ್ಯಕ್ಷ ಎಸ್.ಜಿ. ಪರಮೇಶ್ವರಪ್ಪ, ಗ್ರಾ.ಪಂ. ಅಧ್ಯಕ್ಷ ಎಂ. ನಾಗರಾಜಪ್ಪ, ಉಪಾಧ್ಯಕ್ಷೆ ಪದ್ಮಾವತಿ ಸಾಯಿಪ್ರಸಾದ್, ನಿವೃತ್ತ ಪೊಲೀಸ್ ಅಧಿಕಾರಿ ಟಿ.ಎಸ್. ಮುರುಗಣ್ಣನವರ್, ಸಿ.ಎನ್. ಹುಲಿಗೇಶ್, ಕೆ.ಪಿ. ಗಂಗಾಧರ್, ಪಿ.ಹೆಚ್. ಶಿವಕುಮಾರ್, ಭೋವಿ ಕುಮಾರ್, ಗ್ರಾಮದ ಮುಖಂಡರಾದ ಆನೆಕೊಂಡದ ಬಸವರಾಜಪ್ಪ, ಬಾವಿಕಟ್ಟೆ ಮರುಳಪ್ಪ, ಜಿ.ಸಿ. ರುದ್ರಪ್ಪ, ಭೋವಿ ಅಂಜಿನಪ್ಪ, ಸುಂಕದರ ಕರಿಬಸಪ್ಪ, ಸುಂಕದರ ಹನುಮಂತಪ್ಪ, ಪೂಜಾರ ಹನುಮಂತಪ್ಪ, ಪೂಜಾರ್ ಚಿಕ್ಕಪ್ಪ, ಮುಗಳಗೇರಿಯ ಬಸಯ್ಯ, ಯೋಗಯ್ಯ, ಮಲ್ಲಿಕಾರ್ಜುನಯ್ಯ ಸ್ವಾಮಿಗಳು ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಯಾದಗಿರಿ ಜಿಲ್ಲಾ ಪೊಲೀಸ್ ಕಛೇರಿಯ ಸಿಪಿಐ ದೇವೇಂದ್ರಪ್ಪ ಸ್ವಾಗತಿಸಿದರು.

## ಕೆರೆಯಂತಾದ ಕೊಟ್ಟೂರು ಬಸ್ ನಿಲ್ದಾಣ



ಕೊಟ್ಟೂರು, ಮೇ 15 - ತಾಲ್ಲೂಕಿನಲ್ಲಿ ಬುಧವಾರ ಮಧ್ಯಾಹ್ನ ಒಂದು ಗಂಟೆಗೂ ಹೆಚ್ಚು ಕಾಲ ಸುರಿದ ಮಳೆಯಿಂದ ಬಸ್ ನಿಲ್ದಾಣದ ತುಂಬಾ ನೀರು ನಿಂತು ಪ್ರಯಾಣಿಕರು ಪರದಾಡುವಂತಯಿತು.

## ಹೊನ್ನಾಳಿ : ಸಾಯಿ ಗುರುಕುಲ ಶಾಲೆಗೆ ಶೇ.100 ಫಲಿತಾಂಶ





ಹೊನ್ನಾಳಿ, ಮೇ 14 - ಶ್ರೀ ಸಾಯಿ ಗುರುಕುಲ ವಸತಿಯುತ ಸಿ.ಬಿ.ಎಸ್.ಇ ಶಾಲೆಗೆ 10ನೇ ತರಗತಿಯಲ್ಲಿ ಶೇ.100 ಫಲಿತಾಂಶ ಬಂದಿದೆ ಎಂದು ಸಂಸ್ಥೆಯ ಕಾರ್ಯದರ್ಶಿ ಸೌಮ್ಯ ಪ್ರದೀಪ್ ಗೌಡ ತಿಳಿಸಿದರು.

2023-24ನೇ ಸಾಲಿನ 10ನೇ ತರಗತಿಯ ಪರೀಕ್ಷೆಗೆ 46 ವಿದ್ಯಾರ್ಥಿಗಳು ಹಾಜರಾಗಿದ್ದು, ಅವರಲ್ಲಿ 12 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದು, 20 ವಿದ್ಯಾರ್ಥಿಗಳು ಪ್ರಥಮ ಸ್ಥಾನ, 14 ವಿದ್ಯಾರ್ಥಿಗಳು ದ್ವಿತೀಯ ಸ್ಥಾನ ಪಡೆದು ತೇರ್ಗಡೆಯಾಗಿದ್ದಾರೆ.

ಎಂ.ಆರ್.ಶ್ರೇಯಾ 500 ಅಂಕಗಳಿಗೆ 471 ಅಂಕಗಳನ್ನು ಪಡೆದು ಶೇ.94.2 ಪ್ರಥಮ, ಎಂ.ಮೇಘರಾಜ್ 500 ಅಂಕಗಳಿಗೆ 462 ಅಂಕಗಳನ್ನು ಪಡೆದು ಶೇ.92.4 ದ್ವಿತೀಯ, ಎಂ.ಜಿ.ತನುಶ್ರೀ 500 ಅಂಕಗಳಿಗೆ 457 ಅಂಕಗಳನ್ನು ಪಡೆದು ಶೇ.91.4 ತೃತೀಯ ಸ್ಥಾನ ಪಡೆದಿದ್ದಾರೆ.

ವಿದ್ಯಾರ್ಥಿಗಳಿಗೆ ಸಂಸ್ಥೆಯ ಅಧ್ಯಕ್ಷ ಶಾಸಕ ಡಿ.ಜಿ.ಶಾಂತನಗೌಡ, ಖಜಾಂಚಿ ಡಿ.ಎಸ್.ಸೋಮಪ್ಪ, ಉಪಾಧ್ಯಕ್ಷರಾದ ಡಿ.ಹೆಚ್. ಶಂಕ್ರಪ್ಪಗೌಡ, ನಿರ್ದೇಶಕ ರಾದ ವಾಣಿ ಸುರೇಂದ್ರಗೌಡ, ಡಿ.ಎಸ್.ಪ್ರದೀಪ್ ಗೌಡ, ಡಿ.ಎಸ್.ಅರುಣ್, ಹೆಚ್.ಬಿ. ಅರುಣ್, ಗೌರಮ್ಮ, ಜಿ.ಆರ್.ಶೀಲಾ, ಪ್ರಾಂಶುಪಾಲರಾದ ಹೆಚ್.ಎಂ.ದರ್ಶನ್, ಶಿಕ್ಷಣ ಸಂಯೋಜಕ ಎ.ಜಿ.ಹರೀಶ್ ಕುಮಾರ್ ಅಭಿನಂದನೆ ಸಲ್ಲಿಸಿದ್ದಾರೆ.

## ಎಸ್ಸೆಸ್ಸೆಲ್ಸಿ : ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಗೆ ಶೇ.100 ಫಲಿತಾಂಶ





**ಎಚ್. ಕಡದಕಟ್ಟೆ**

ಹೊನ್ನಾಳಿ, ಮೇ 15 - ತಾಲ್ಲೂಕಿನ ಎಚ್. ಕಡದಕಟ್ಟೆಯ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಗೆ ಎಸ್.ಎಸ್.ಎಲ್.ಸಿ. ಫಲಿತಾಂಶದಲ್ಲಿ ಶೇ.100 ಫಲಿತಾಂಶ ಬಂದಿದೆ ಎಂದು ಶಾಲೆಯ ಪ್ರಾಂಶುಪಾಲರಾದ ಕೆ.ಎನ್. ಸುಪ್ರಿಯಾ ತಿಳಿಸಿದ್ದಾರೆ.

ಪರೀಕ್ಷೆಗೆ 50 ವಿದ್ಯಾರ್ಥಿನಿಯರು ಹಾಜರಾಗಿದ್ದು, 16 ವಿದ್ಯಾರ್ಥಿನಿಯರು ಅತ್ಯುನ್ನತ ಶ್ರೇಣಿ ಪಡೆದಿದ್ದಾರೆ, 27 ವಿದ್ಯಾರ್ಥಿನಿಯರು ಪ್ರಥಮ ದರ್ಜೆ, 6 ವಿದ್ಯಾರ್ಥಿನಿಯರು ದ್ವಿತೀಯ ದರ್ಜೆ ಮತ್ತು ಒಬ್ಬ ವಿದ್ಯಾರ್ಥಿನಿ ಮಾತ್ರವೇ ತೃತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ.

8 ವಿದ್ಯಾರ್ಥಿನಿಯರು ಕನ್ನಡ ವಿಷಯದಲ್ಲಿ 125ಕ್ಕೆ 125 ಅಂಕಗಳಿಸಿದ್ದು, ಇಬ್ಬರು ವಿದ್ಯಾರ್ಥಿನಿಯರು ಹಿಂದಿ ವಿಷಯದಲ್ಲಿ 100ಕ್ಕೆ 100 ಅಂಕ ಗಳಿಸಿದ್ದಕ್ಕಾಗಿ ಸಂತಸ ವ್ಯಕ್ತಪಡಿಸಿದರು.

ಇ. ರಾಜೇಶ್ವರಿ 602 ಅಂಕಗಳಿಂದ 96.32% ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದರೆ, ಎಸ್.ಡಿ. ಸಿಂಚನ 597 ಅಂಕಗಳಿಂದ 95.52% ಪಡೆದು ಶಾಲೆಗೆ ದ್ವಿತೀಯ ಸ್ಥಾನ, ಭೂಮಿಕಾ ಮತ್ತು ಪಿ.ಎಸ್. ಛಾಯಾ 590 ಅಂಕಗಳಿಂದ 94.40% ಪಡೆದು ತೃತೀಯ ಸ್ಥಾನವನ್ನು ಹಂಚಿಕೊಂಡಿದ್ದಾರೆ.

## ಹೊನ್ನಾಳಿ : ವಿಜೃಂಭಣೆಯ ಬನ್ನಿ ಮಹಾಂಕಾಳಿ ರಥೋತ್ಸವ

ಹೊನ್ನಾಳಿ, ಮೇ 15- ಪಟ್ಟಣದ ಬನ್ನಿಮಹಾಂಕಾಳಿ ದೇವತೆಯ 8ನೇ ವರ್ಷದ ರಥೋತ್ಸವ ದೇವಸ್ಥಾನ ಪಕ್ಕ ಮೈಧಾನದಲ್ಲಿ ಅದ್ದೂರಿಯಾಗಿ ನಡೆಯಿತು.

ಬನ್ನಿಮಹಾಂಕಾಳಿ ರಥಕ್ಕೆ ವಿವಿಧ ಹೂಗಳಿಂದ ಅಲಂಕರಿಸಿ, ರಥದ ಗಾಲಿಗಳಿಗೆ ಹೆಣ್ಣೆಯನ್ನು ಹಾಕಿ ರಥವನ್ನು ಶೃಂಗರಿಸಲಾಗಿತ್ತು.

ರಥಕ್ಕೆ ವಿವಿಧ ಬಣ್ಣದ ಬಾವುಟಗಳು ಮತ್ತು ಹೂವುಗಳು ಮತ್ತು ಬಾಳೆ ಕಂಬಗಳನ್ನು ಕಟ್ಟಲಾಗಿತ್ತು.

ಅಲಂಕಾರಗೊಂಡಿದ್ದ ರಥದಲ್ಲಿ ಬನ್ನಿಮಹಾಂಕಾಳಿ ದೇವತೆನ್ನುಟ್ಟು ಬುಧವಾರ ಮಧ್ಯಾಹ್ನ ರಥಕ್ಕೆ ಶಾಂತಿ ಪೂಜೆ ನಡೆಸಿ, ಅರ್ಚಕರಿಂದ ರಥಕ್ಕೆ ಪೂಜೆ ಮಾಡಿದ ನಂತರ ರಥವನ್ನು ಭಕ್ತ ಸಮೂಹ ಎಳೆದ ತಮ್ಮ ಭಕ್ತಿ ಸರ್ಮರ್ಪಿಸಿದರು.



ಕೆಲ ಭಕ್ತರು ರಥದ ಮೇಲೆ ಬಾಳೆಹಣ್ಣು, ಕಾಳುಮೆಣಸು, ಮಂಡಕ್ಕಿ ಮತ್ತಿತರ ವಸ್ತುಗಳನ್ನು ತೂರುತ್ತಾ ಭಕ್ತರು ತಮ್ಮ ಭಕ್ತಿ ಸಮರ್ಪಿಸಿದರು. ರಥದ ಗಾಲಿಗಳಿಗೆ ತೆಂಗಿನ ಕಾಯಿ ಒಡೆದು, ಬಾಳೆಹಣ್ಣು ನೈವೇದ್ಯ ಮಾಡಿ ಕೃತಾರ್ಥರಾದರು.

ಬುಧವಾರ ಮಧ್ಯಾಹ್ನ ರಥೋತ್ಸವ ನಡೆಯು ಸಂದರ್ಭದಲ್ಲಿ ಅರಕೆರೆ ಗ್ರಾಮದ ವೀರಾಗಾಸೆ ತಂಡದವರಿಂದ ಪುರವಂತಿಕೆ ನಡೆಸಿದರು.

ದೊಡ್ಡಪೇಟೆ ಕುಂಕುದ್‌ಜ್ಯೋತಿ ಪ್ರಕಾಶ್ ವಿವಿಧ ದಾನಿಗಳಿಂದ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿತ್ತು. ಸಮಿತಿ ಗೌರವಧ್ಯಕ್ಷ ಕೊಟ್ರೇಶಪ್ಪ, ರವಿಕುಮಾರ್, ಅಧ್ಯಕ್ಷ ಶಾಂತರಾಜ್, ಉಪಾಧ್ಯಕ್ಷ ಪ್ರಕಾಶ್, ಕಾರ್ಯದರ್ಶಿ ಚಂದ್ರಚಾರ್, ಪ್ರಕಾಶ್, ಖಜಾಂಚಿ ಪ್ರಭಕಾರ ಸೇರಿದಂತೆ ಇತರರು ಭಾಗವಹಿಸಿದ್ದರು.



## ನಿಟ್ಟೂರಿನಲ್ಲಿ ಟ್ರಾಫಿಕ್ ಜಾಮ್

ಮಲೇಬೆನ್ನೂರು, ಮೇ 15- ನಿಟ್ಟೂರು ಗ್ರಾಮದಲ್ಲಿ ಜರುಗಿದ ಗ್ರಾಮದೇವತೆ ಶ್ರೀ ಮಾರಿಕಾಂಭ ದೇವಿ ಹಬ್ಬದ ಅಂಗವಾಗಿ ಬುಧವಾರ ಸಂಜೆ ಬಾಡೂಟಕ್ಕೆ ಆಗಮಿಸಿದ್ದ ಬಂಧು ಮಿತ್ರರಿಂದಾಗಿ ಗ್ರಾಮದಲ್ಲಿ ಟ್ರಾಫಿಕ್ ಜಾಮ್ ಉಂಟಾಗಿತ್ತು.

16 ವರ್ಷಗಳ ನಂತರ ನಡೆದ ಗ್ರಾಮದೇವತೆ ಹಬ್ಬವನ್ನು ಗ್ರಾಮಸ್ಥರು ಬಹಳ ಸಂಭ್ರಮದಿಂದ ಆಚರಿಸಿದರು. ಬುಧವಾರ ಸಂಜೆ ಸುಮಾರು ಸಾವಿರಕ್ಕೂ ಹೆಚ್ಚು ಕಾರು, ಬೈಕುಗಳು ಗ್ರಾಮಕ್ಕೆ ಬಂದಿದ್ದರಿಂದ ರಾತ್ರಿ 10 ರವರೆಗೆ ಆಗಿದ್ದ ಟ್ರಾಫಿಕ್ ಜಾಮ್ ನಂತರ ಸಹಜ ಸ್ಥಿತಿಗೆ ಬಂದಿತು. ದೇವಸ್ಥಾನದಲ್ಲಿ ಬೆಳಗಿನ ಜಾವ ಹಿಟ್ಟಿನ ಕೋಣದ ಬಲಿ ನೀಡಿದ ನಂತರ ಅಮ್ಮನಿಗೆ ಪೂಜೆ ಸಲ್ಲಿಸಲಾಯಿತು ನಂತರ ಭಕ್ತರಿಂದ ವಿವಿಧ ರೀತಿಯ ಸೇವೆ - ಹರಕೆಗಳು ಸಂಜೆಯವರೆಗೂ ನಡೆದವು.

## ಮಲೇಬೆನ್ನೂರಿನಲ್ಲಿ ಇಂದು

ಪಟ್ಟಣದ ಪೇಟೆ ರಸ್ತೆಯಲ್ಲಿರುವ ಶ್ರೀ ಕಾಳಿಕಾದೇವಿ ಪ್ರಾಣ ಪ್ರತಿಷ್ಠಾಪನಾ ಮಹೋತ್ಸವದ ಪ್ರಥಮ ವಾರ್ಷಿಕೋತ್ಸವದ ಅಂಗವಾಗಿ ಇಂದು ಬೆಳಗ್ಗೆ 8 ಗಂಟೆಯಿಂದ ವಿಶೇಷ ಪೂಜೆ, ಅಭಿಷೇಕ ಮತ್ತು ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ ಎಂದು ಆನಂದಚಾರ್ ತಿಳಿಸಿದ್ದಾರೆ.

## ಹರಿಹರದಲ್ಲಿ ದೈವಿ ಉಪಾಸಕ ನಾಗೇಂದ್ರಕುಮಾರ್ ಗುರೂಜಿ ಸತ್ಸಂಗ

ಹರಿಹರ, ಮೇ 15- ನಗರದ ಹೊರವಲಯದ ಶ್ರೀ ಎಲ್ಲಮ್ಮ ತುಳಜಾ ಸಾ ಭೂತೆ ಮೆಮೋರಿಯಲ್ ಹಾಲ್‌ನಲ್ಲಿ ಶ್ರೀ ಮಾತಾ ಅಪ್ಪಾಜಿ ವರ್ಧಂತಿ ಪ್ರಯುಕ್ತ ಸತ್ಸಂಗ, ವಿವಿಧ ಪೂಜಾ ಕಾರ್ಯಕ್ರಮವನ್ನು ದೈವೀ ಉಪಾಸಕ ನಾಗೇಂದ್ರ ಕುಮಾರ್ ಗುರೂಜಿ ನೆರವೇರಿಸಿದರು.



ಈ ಸಂದರ್ಭದಲ್ಲಿ ಸತ್ಯನಾರಾಯಣ ರಾವ್, ಅರುಣ್ ರಾವ್, ರಾಜು, ಸಣ್ಣಕರ್, ಬಸವರಾಜ್ ಗುತ್ತೂರು, ಯಾದಗಿರಿ ಈರಣ್ಣ ಚನ್ನಿಗಪ್ಪನವರ್, ಮಂಜುನಾಥ್, ರುದ್ರೇಶ್ ತಿಪ್ಪಣ್ಣನವರ್, ರವಿಕುಮಾರ್, ನಯನ, ರೇಣುಕಾ, ರೋಹಿಣಿ ಇತರರು ಹಾಜರಿದ್ದರು

## ಪಾಟ್ನಾ : ನಟ ಪವನ್ ಸಿಂಗ್ ತಾಯಿ ಕಣಕ್ಕೆ

ಪಾಟ್ನಾ, ಮೇ 15 - ಭೂಜಪುರಿ ಚಿತ್ರತಾರೆ ಪವನ್ ಸಿಂಗ್ ಅವರ ತಾಯಿ ಪ್ರತಿಮಾ ದೇವಿ ಅವರು ಕರಕಟ್ ಲೋಕಸಭಾ ಕ್ಷೇತ್ರದಿಂದ ನಾಮಪತ್ರ ದಾಖಲಿಸಿದ್ದಾರೆ. ಈ ಕ್ಷೇತ್ರದಲ್ಲಿ ಪವನ್ ಸಿಂಗ್ ಅವರು ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ.

ಈ ಕ್ಷೇತ್ರದಲ್ಲಿ ರಾಷ್ಟ್ರೀಯ ಲೋಕ ಮೋರ್ಚಾ ದಿಂದ ಉಪೇಂದ್ರ ಕುಶ್ವಾಹ ಕಣದಲ್ಲಿದ್ದಾರೆ. ರಾಷ್ಟ್ರೀಯ ಲೋಕ ಮೋರ್ಚಾ ಎನ್.ಡಿ.ಎ. ಭಾಗವಾಗಿದೆ.

ಆರ್.ಜೆ.ಡಿ. ಜೊತೆ ಮೈತ್ರಿಯಲ್ಲಿರುವ ಸಿಪಿಐ (ಎಂಎಲ್) ಪಕ್ಷದ ರಾಜಾರಾಮ್ ಸಿಂಗ್ ಕಣದಲ್ಲಿದ್ದಾರೆ. ಜೂನ್ 1ರಂದು ಚುನಾವಣೆ ನಡೆಯಲಿದೆ. ಪವನ್ ಸಿಂಗ್ ಅವರು ಪಶ್ಚಿಮ ಬಂಗಾಳದ ಅಸನ್ಸೋಲ್‌ನಿಂದ ಬಿಜೆಪಿ ಪರವಾಗಿ ಸ್ಪರ್ಧಿಸಲು ನಿರಾಕರಿಸಿದ್ದರು. ಕರಕಟ್‌ನಲ್ಲಿ ಪ್ರತಿಪಕ್ಷಗಳ ಅಭ್ಯರ್ಥಿಯಾಗಿ ಕಣಕ್ಕಿಳಿಯಲು ಪ್ರಯತ್ನ ನಡೆಸಿದ್ದರು. ನಂತರ ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ.

## ಉಚಿತ ಆರೋಗ್ಯ ತಪಾಸಣೆ, ಸಲಹಾ ಶಿಬಿರ

ದಾವಣಗೆರೆ, ಮೇ 15 - ಸೈನೆರ್ಜಿ ಎಂಜಿನಿಯರಿಂಗ್‌ನ ಎಂ.ಓ ನಿರಂಜನ್ ಅವರ ಪಾಲಕರಾದ ಮಾಗಾನಹಳ್ಳಿ ಓಂಕಾರಪ್ಪ ಹಾಗೂ ಎಂ.ಜಿ ನೀಲಮ್ಮನವರ ತೃತೀಯ ವರ್ಷದ ಸ್ಮರಣಾರ್ಥವಾಗಿ ಇತ್ತೀಚೆಗೆ ನಿರಂಜನ್ ಅವರು ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ಉಚಿತ ಆರೋಗ್ಯ ತಪಾಸಣೆ ಮತ್ತು ಸಲಹಾ ಶಿಬಿರ ಆಯೋಜಿಸಿದ್ದರು.

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಎಂ.ಎಸ್.ಟಿ ಕೇರ್ ಆಪ್ಟಿಕಲ್ಸ್ ಅವರು ಉಚಿತ ನೇತ್ರ ತಪಾಸಣೆ ಮತ್ತು ಕಣ್ಣಿನ ಸಂರಕ್ಷಣೆ ಬಗ್ಗೆ ಸಲಹೆ ನೀಡಿದರು.

ಪಿ.ಜೆ. ಬಡಾವಣೆಯಲ್ಲಿ ಸಿದ್ದಗಂಗಾ ಉಚಿತ ರಕ್ತದಾನ ಮತ್ತು ವಿಭಜನಾ ಘಟಕದ ಆಶ್ರಯದಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ನಡೆಯಿತು. ತಪೋವನದ ಪ್ರಕೃತಿ ಮತ್ತು ಯೋಗ ಚಿಕಿತ್ಸೆ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆಯ ಆಶ್ರಯದಲ್ಲಿ ಸೂಜಿ ಚಿಕಿತ್ಸೆ, ಫಿಜಿಯೋಥೆರಪಿ, ಯೋಗ ಚಿಕಿತ್ಸೆ ಹಾಗೂ ಆಹಾರ ಪದ್ಧತಿ ಬಗ್ಗೆ ಮಾಹಿತಿ ನೀಡಿದರು.

ಬಾಡಾ ಕ್ರಾಸ್‌ನಲ್ಲಿನ ಡಾ. ಪಂಡಿತ್ ಪುಟ್ಟರಾಜ ಗವಾಯಿಗಳ ಶ್ರೀ ವೀರೇಶ್ವರ ಪುಣ್ಯಾಶ್ರಮದ ಆಶ್ರಯದಲ್ಲಿ ವಚನ ಗಾಯನ, ಸಂಗೀತ ಗೋಷ್ಠಿ ಹಾಗೂ ಪುಣ್ಯ ಸ್ಮರಣೆ ಮತ್ತು ಅನ್ನ ಪ್ರಸಾದ ಸೇವೆ ಮಾಡಲಾಯಿತು. ಶಿಬಿರದಲ್ಲಿ ವೈದ್ಯರಾದ ಡಾ. ಮಹಾಲಕ್ಷ್ಮಿ, ಡಾ. ಪ್ರಿಯಾಲಕ್ಷ್ಮಿ, ಡಾ.ಯಶೋಧ, ವೈದ್ಯ ವಿದ್ಯಾರ್ಥಿಗಳಾದ ರವಿತೇಜ, ಅನನ್ಯ, ವೈಷ್ಣವಿ ಹಾಗೂ ಇಂಟರ್ನ್‌ಗಳಾದ ಕಾಂಚನ, ಪ್ರಸನ್ನ ಇದ್ದರು.

## ಜಗಳೂರು : ಕ್ಲಿಷ್ಟಕರ ಹೆರಿಗೆ ಮೂಲಕ 4.6 ಕೆಜಿಯ ಹೆಣ್ಣು ಮಗುವಿನ ಜನನ



ಜಗಳೂರು, ಮೇ 15 - ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ನಿನ್ನೆ ಮಧ್ಯಾಹ್ನ ಕ್ಲಿಷ್ಟಕರ ಹೆರಿಗೆ ಮೂಲಕ ಸುಮಾರು 4.6 ಕೆಜಿಯ ಹೆಣ್ಣು ಮಗುವಿನ ಜನನವಾಗಿದ್ದು, ಹೆರಿಗೆ ನಂತರ ಮಗು ಉಸಿರಾಟದ ತೊಂದರೆಯಿಂದ ಸಾವು ಬದುಕಿನಿಂದ ಬಳಲುತ್ತಿರುವ ಮಗುವಿಗೆ ಎನ್.ಬಿ.ಎಸ್.ಯು ವೈದ್ಯರ ತಂಡ ತುರ್ತು ಚಿಕಿತ್ಸೆ ಕ್ರಮ ಕೈಗೊಳ್ಳುವುದರ ಮೂಲಕ ಮಗುವಿನ ಪ್ರಾಣ ರಕ್ಷಿಸುವಲ್ಲಿ ಯಶಸ್ವಿಯಾಗಿದ್ದಾರೆ.


ತಾಲ್ಲೂಕಿನ ಬಿಳಿಚೂಡು ಗ್ರಾಮದ ಪೂಜಾ ನಾಗರಾಜ್ ಎಂಬ ಮಹಿಳೆ ನಾರ್ಮಲ್ ಹೆರಿಗೆ ಮೂಲಕ ಸುಮಾರು 4.6 ಕೆಜಿ ತೂಕದ ಹೆಣ್ಣು ಮಗುವಿಗೆ ಜನ್ಮ ನೀಡಿದರು.

ಹೆರಿಗೆ ಸಂದರ್ಭದಲ್ಲಿ ಮುಗು ಹುಟ್ಟಿದ ತಕ್ಷಣ ಅಳದೇ ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದ ಸಮಯದಲ್ಲಿ ಸ್ತ್ರೀ ರೋಗ ತಜ್ಞ ಡಾ. ಸಂಜಯ್ , ಮಕ್ಕಳ ತಜ್ಞ ಡಾ. ಜಯಕುಮಾರ್ , ಇ.ಎನ್.ಟಿ. ಸ್ಪೆಷಲಿಸ್ಟ್ ಡಾ. ಕಿರಣ್ ವೈದ್ಯರು ಹಾಗೂ ದಾದಿಯರ ತಂಡ ಮಗು ತುರ್ತು ಚಿಕಿತ್ಸೆ ಮೂಲಕ ಮಗುವನ್ನು ರಕ್ಷಿಸುವ ಮೂಲಕ ಎಲ್ಲಾರ ಮೆಚ್ಚುಗೆ ಪಾತ್ರರಾಗಿದ್ದಾರೆ.

ಇನ್ನೂ ತಾಯಿ ಮುಗು ಆರೋಗ್ಯಕರವಾಗಿದ್ದು ವೀಕ್ಷಿತಸ್ಥಿತಿಗೆ ತಾಯಿ ಮಗುವನ್ನು ದಾವಣಗೆರೆ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಈ ಸಂದರ್ಭದಲ್ಲಿ ಆಡಳಿತ ವೈದ್ಯಧಿಕಾರಿ ಡಾ. ಷಣ್ಮುಖಪ್ಪ, ಶುಶ್ರೂಷೆಯಾರದ ದೀಪಾ , ಜ್ಯೋತಿ , ಶೈಲಜಾ ಸೇರಿದಂತೆ ಇತರೆ ಸಿಬ್ಬಂದಿಗಳು ಮತ್ತಿತರರಿದ್ದರು.

### ಮಹದೇವಪ್ಪ ರುದ್ರಪ್ಪ ಹೊಸಮನಿ ನಿಧನ



ದಾವಣಗೆರೆ ಸಿಟಿ ಶಾಮನೂರು ವಾಸಿಗಳಾದ ರಟ್ಟಿಹಳ್ಳಿ ಗ್ರಾಮದ ಶ್ರೀ ಮಹದೇವಪ್ಪ ರುದ್ರಪ್ಪ ಹೊಸಮನಿ (83) ಇವರು ದಿನಾಂಕ 15.5.2024ರ ರಾತ್ರಿ 8.40ಕ್ಕೆ ಲಿಂಗೈಕ್ಯರಾದರು. ಇಬ್ಬರು ಪುತ್ರರು, ಮೂವರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 16.05.2024ರ ಗುರುವಾರ ಮಧ್ಯಾಹ್ನ 2 ಗಂಟೆಗೆ ನಗರದ ಗ್ಲಾಸ್ ಹೌಸ್ ಹಿಂಭಾಗದ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

## ಭಾರತದ 40 ನಾವಿಕರ ಬಿಡುಗಡೆಗಾಗಿ ಆಗ್ರಹ

ನವದೆಹಲಿ, ಮೇ 15 - ಇರಾನ್ ಕಳೆದ ಎಂಟು ತಿಂಗಳಲ್ಲಿ ವಿವಿಧ ಆರೋಪಗಳ ಮೇಲೆ ಬಂಧಿಸಿರುವ ಭಾರತದ 40 ನಾವಿಕರನ್ನು ಬಿಡುಗಡೆ ಮಾಡುವಂತೆ ಭಾರತ ಆಗ್ರಹಿಸಿದೆ. ಇರಾನ್ ವಿದೇಶಾಂಗ ಸಚಿವ ಹೊಸೇನ್ ಅಮೀರ್ ಅಬ್ದೊಲ್ಲಾಹಿಯಾನ್ ಅವರನ್ನು ತೆಹರಾನ್‌ನಲ್ಲಿ ಭೇಟಿ ಮಾಡಿದ ಸಂದರ್ಭದಲ್ಲಿ ಬಂದರು ಸಚಿವ ಸರ್ಬಾನಂದ ಸೊನಾವಲ್ ಅವರು ಈ ವಿಷಯ ತಿಳಿಸಿದ್ದಾರೆ.

### ಲಕ್ಷ್ಮಣ್ ರಾವ್ ಪಿಸಾಳೆ ನಿಧನ



ದಾವಣಗೆರೆ ಸಿಟಿ ಪಿಸಾಳೆ ಕಾಂಪೌಂಡ್ ವಾಸಿ
**ಲಕ್ಷ್ಮಣ್ ರಾವ್ ಪಿಸಾಳೆ** (75)
ಅವರು ದಿನಾಂಕ : 15.05.2024ರಂದು ಬುಧವಾರ ರಾತ್ರಿ 9.50ಕ್ಕೆ ನಿಧನರಾಗಿದ್ದಾರೆ. ಪತ್ನಿ, ಓರ್ವ ಪುತ್ರಿ, ಅಳಿಯ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 16.05.2024ರಂದು ಗುರುವಾರ ಮಧ್ಯಾಹ್ನ 12 ಗಂಟೆಗೆ ನಗರದ ಪಿ.ಬಿ. ರಸ್ತೆಯ ವೈಕುಂಟಧಾಮದಲ್ಲಿ ನೆರವೇರಲಿದೆ.

ಇಂತಿ ದುಃಖತಪ್ತ ಕುಟುಂಬ ವರ್ಗ : **95138 35324, 85537 97277**

## ದಂಪತಿಗಳ ಬದುಕಿನಲ್ಲಿ ಸಾಮರಸ್ಯವೇ ಪ್ರಧಾನ ಅಂಶ

### ಬೃಹನ್ಮಠದ ಸಾಮೂಹಿಕ ಕಲ್ಯಾಣ ಮಹೋತ್ಸವದಲ್ಲಿ ಡಾ. ಬಸವಕುಮಾರ ಸ್ವಾಮೀಜಿ



ಚಿತ್ರದುರ್ಗ, ಮೇ 15 - ದಂಪತಿಗಳ ಬದುಕಿನಲ್ಲಿ ಸಾಮರಸ್ಯವೇ ಪ್ರಧಾನವಾಗಬೇಕು. ನಾನೆಚ್ಚು, ನೀನು ಕಡಿಮೆ ಎಂದರೆ ಅದು ಸಾರವತ್ತಾದ ಸಂಸಾರವಾಗಲು ಸಾಧ್ಯವಿಲ್ಲ. ಅನ್ಯೋನ್ಯತೆಯೇ ಇಲ್ಲಿ ಪ್ರಧಾನ ಅಂಶವಾಗಬೇಕು ಎಂದು ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ ಮತ್ತು ಎಸ್.ಜೆ.ಎಂ. ವಿದ್ಯಾಪೀಠದ ಆಡಳಿತ ಮಂಡಳಿ ಸದಸ್ಯರಾದ ಡಾ. ಬಸವಕುಮಾರ ಸ್ವಾಮೀಜಿ ಹಿತ ನುಡಿದರು.

ಬೃಹನ್ಮಠದ ಆವರಣದಲ್ಲಿನ ಅನುಭವ ಮಂಟಪದಲ್ಲಿ ಆಯೋಜಿಸಲಾಗಿದ್ದ 34ನೇ ವರ್ಷದ ಐದನೇ ತಿಂಗಳ ಸಾಮೂಹಿಕ ಕಲ್ಯಾಣ ಮಹೋತ್ಸವದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸದಾ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡ ಶ್ರೀ ಬೃಹನ್ಮಠದ ಸಾಮಾಜಿಕ ಕಾರ್ಯಗಳಲ್ಲಿ ಈ ಸರಳ, ಸಾಮೂಹಿಕ ವಿವಾಹವೂ ಒಂದು. ಇದು ಎಷ್ಟೋ ಬಡಜನರ ಪಾಲಿಗೆ ಆಶಾಕಿರಣವಾಗಿದೆ. ಅಲ್ಲದೇ ದುಂದು ವೆಚ್ಚಕ್ಕೆ ಕಡಿವಾಣ ಹಾಕುವ ಕ್ರಮವೂ ಶ್ಲಾಘನೀಯ ಎಂದರು.

ಸಮಾರಂಭದ ಸಾನ್ನಿಧ್ಯ ವಹಿಸಿದ್ದ ದಾವಣಗೆರೆ ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಮಾತನಾಡಿ, ಜೀವನ ಸುಖವಾಗಿ ನಡೆಯಲು ಎಲ್ಲರಲ್ಲೂ ನಂಬಿಕೆ ಅಗತ್ಯ. ಅದು ಇರದೇ ಹೋದರೆ ಸಂಸಾರ ವಿಘಟನೆಯ ಹಾದಿ ಹಿಡಿಯುತ್ತದೆ. ಕುಟುಂಬ ಅಂದರೆ ತೊಂದರೆ, ತಾಪತ್ರಯ, ಸಮಸ್ಯೆ ಇರುವುದು ಸಹಜ. ಅವುಗಳನ್ನು ತಾಳ್ಮೆ, ಸಹನೆಯಿಂದ ಪರಿಹರಿಸಿಕೊಂಡು ಸಾಗಬೇಕು ಎಂದು ತಿಳಿಸಿದರು.

ಈ ವೇದಿಕೆಯಲ್ಲಿ ಬಡವರು ಮಾತ್ರ ಮದುವೆ ಮಾಡಿಕೊಂಡಿಲ್ಲ. ಸಿರಿವಂತರೂ ಇಲ್ಲಿ ತಮ್ಮ ಕಲ್ಯಾಣ ಮಹೋತ್ಸವ ನೆರವೇರಿಸಿಕೊಂಡು ಹೋಗಿರುವ ಉದಾಹರಣೆ ಇದೆ. ಅಂತಹ ಸಾಮಾಜಿಕ ಹೊಣೆಗಾರಿಕೆ ಶ್ರೀಮಠದ್ದಾಗಿದೆ. ಎಂತಹ ಸಂದರ್ಭದಲ್ಲಿಯೂ ಸಾಮೂಹಿಕ ಕಲ್ಯಾಣ ಮಹೋತ್ಸವಗಳು ನಿಂತಿರುವ ಉದಾಹರಣೆ ಇಲ್ಲ ಎಂದು ಸ್ವಾಮೀಜಿ ನುಡಿದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಚಿತ್ರದುರ್ಗ ಬೃಹನ್ಮಠದ ಖಾಸಾಮಠ ಗುರುಮಠಕಲ್‌ನ ಶ್ರೀ ಶಾಂತವೀರ ಗುರು ಮುರುಘರಾಜೇಂದ್ರ ಸ್ವಾಮೀಜಿ ಮಾತನಾಡಿ, ಜೀವನದಲ್ಲಿ ಯಾವುದಕ್ಕೆ ಕೊರತೆಯಾದರೂ ಸಹ ವಿಶ್ವಾಸಕ್ಕೆ ಭಂಗ ಬರಬಾರದು. ಪರಸ್ಪರ ಪ್ರೀತಿ-ವಿಶ್ವಾಸ ಸಹ ಬಾಳ್ವೆಯಿಂದ ಬದುಕು ಹಸನಾಗಲು ಸಾಧ್ಯವಿದೆ. ಅಂತಹ ದಾರಿಯಲ್ಲಿ ನೂತನ ದಂಪತಿಗಳು ಸಾಗಬೇಕು ಎಂದು ಸಲಹೆ ನೀಡಿದರು.

ಜಮುರಾ ಕಲಾವಿದ ಉಮೇಶ ಪತ್ತಾರ ಮತ್ತು ಸಂಗಡಿಗರು ವಚನ ಗಾಯನ ಮತ್ತು ಗಂಜಿಗಟ್ಟೆ ಕೃಷ್ಣಮೂರ್ತಿ ಲಾವಣಿ ಪದಗಳನ್ನು ಹಾಡಿದರು.

## ರಾಣೇಬೆನ್ನೂರಿನಲ್ಲಿ ಇಂದು ವಿದ್ಯುತ್ ವ್ಯತ್ಯಯ

ಕಂಠಿ ಬೀರೇಶ್ವರ ನಗರ, ವಿಶ್ವಬಂಧು ನಗರ, ಚನ್ನೇಶ್ವರ ನಗರ, ಕಮಲಾ ನಗರ, ಸಿದ್ದಾರೂಢ ನಗರ, ಕೆಚ್.ಬಿ ಫೇಸ್-1, ಮಾಗೋಡ ರಸ್ತೆ, ಕೆ.ಎಸ್.ಎಸ್.ಐ.ಡಿ.ಸಿ, ಎಸ್.ಟಿ.ಜೆ.ಐ.ಟಿ ಕಾಲೇಜ್, ಚಿದಂಬರ ನಗರ, ನೇಕಾರ ಕಾಲೋನಿ, ಕೆಚ್‌ಡಿಸಿ, ಶಾಂತಿನಗರ ಮತ್ತು ದಾನೇಶ್ವರ ನಗರಗಳಿಗೆ ಇಂದು ಬೆಳಿಗ್ಗೆ 11ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ

ದಾವಣಗೆರೆ, ಮೇ 15 -ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಮತ್ತು ಪರಿಸರ ಸಂಘ ಇವರುಗಳ ವತಿಯಿಂದ ಭೂ ಸುಧಾರಣೆ ಹಾಗೂ ಮರುಭೂಮೀಕರಣ ಮತ್ತು ಬರ ಸ್ಥಿತಿಸ್ಥಾಪಕತ್ವ ಎಂಬ ಶೀರ್ಷಿಕೆಯಡಿಯಲ್ಲಿ ಒಂದು ದಿನದ ರಾಷ್ಟ್ರೀಯ ಕಾರ್ಯಾಗಾರವನ್ನು ಆಯೋಜಿಸಲಾಗಿದೆ.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಜೂನ್ 8 ರಂದು ಕನ್ನಡ ಮತ್ತು ಇಂಗ್ಲಿಷ್- 1000 ಪದಗಳಿಗೆ ಮೀರದಂತೆ ಭೂಮಿ ಮತ್ತು ಮಣ್ಣಿನ ಮೇಲೆ ಹವಾಮಾನ ಬದಲಾವಣೆಯ ಪರಿಣಾಮಗಳು ವಿಷಯದ ಮೇಲೆ ಪ್ರಬಂಧ ಸ್ಪರ್ಧೆ ಏರ್ಪಡಿಸ ಲಾಗಿದೆ. ಉತ್ತಮ ಪ್ರಬಂಧಗಳಿಗೆ ಸೂಕ್ತ ಬಹು ಮಾನ ಮತ್ತು ಪ್ರಶಸ್ತಿ ಪತ್ರ ನೀಡಲಾಗುವುದು.

ಭಾಗವಹಿಸುವ ವಿದ್ಯಾರ್ಥಿಗಳು ಅಕಾಡೆಮಿಯ ಇ-ಮೇಲ್ essay.ksta@gmail.comಗೆ ಹೆಸರು, ಮೊಬೈಲ್ ಸಂಖ್ಯೆ, ಶಾಲೆಯ ಹೆಸರು, ಪ್ರಬಂಧದ ಭಾಷೆ ಕನ್ನಡ, ಆಂಗ್ಲ ಭಾಷೆಯಲ್ಲಿ ಬರೆದು ಪೋಸ್ಟ್ ಮೂಲಕ ಮೇ 27 ರೊಳಗಾಗಿ ಕಚೇರಿ ಕಳುಹಿಸುವುದು. ಹೆಚ್ಚಿನ ಮಾಹಿತಿಗಾಗಿ ಮೊ.9008675123 ಸಂಪರ್ಕಿಸಲು ರಿಜಿಸ್ಟ್ರಾರ್ ಎ.ಎಂ.ರಮೇಶ್ ತಿಳಿಸಿದ್ದಾರೆ.

# ಸಂಸ್ಕೃತಿ ಉಳಿಸುವುದು ನಮ್ಮ ಕೈಯ್ಯಲ್ಲಿದೆ

ಹೊನ್ನಾಳಿ : ಅಕ್ಕಮಹಾದೇವಿ ಜಯಂತಿಯಲ್ಲಿ ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮೀಜಿ



ಹೊನ್ನಾಳಿ, ಮೇ 14 - ಸನಾತನ ಧರ್ಮ ಬಹಳ ವಿಶೇಷವಾಗಿದೆ. ನಮ್ಮ ಸಂಸ್ಕೃತಿ, ಪರಂಪರೆ ಉಳಿಸಿಕೊಳ್ಳುವ ಜವಾಬ್ದಾರಿ ನಮ್ಮ ಕೈಯ್ಯಲ್ಲಿದೆ ಎಂದು ಹೊನ್ನಾಳಿಯ ಚನ್ನಮಲ್ಲಿಕಾರ್ಜುನ ಶ್ರೀಗಳು ಹೇಳಿದರು.

ತಾಲ್ಲೂಕು ಶರಣ ಸಾಹಿತ್ಯ ಪರಿಷತ್, ಮಹಿಳಾ ಕದಳಿ ವೇದಿಕೆಯಿಂದ ಇಲ್ಲಿನ ಹಿರೇಕಲ್ಮಠದಲ್ಲಿ ನಡೆದ ಅಕ್ಕಮಹಾದೇವಿ ಜಯಂತಿ ಹಾಗೂ ದತ್ತಿ ಉಪನ್ಯಾಸ, ಸುಸಂಸ್ಕೃತ ಸಂಸ್ಕಾರ ವೈಭವದ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಶ್ರೀಗಳು ಮಾತನಾಡಿದರು.

ಸಂಸ್ಕಾರ ವೈಭವ ಕಾರ್ಯಕ್ರಮಗಳಿಂದ ಮಾತ್ರ ಯುವ ಪೀಳಿಗೆ ಸನಾತನ ಸಂಸ್ಕೃತಿ ಅರಿಯಲು ಸಾಧ್ಯ ಎಂದು ಶ್ರೀಗಳು ಹೇಳಿದರು.

'ಅಕ್ಕಮಹಾದೇವಿ ಅವರ ಜೀವನ ದೃಷ್ಟಿ' ಎಂಬ ವಿಷಯ ಕುರಿತು ಪ್ರಾಚಾರ್ಯರಾದ ಎಂ. ಮಮತಾ ಮಾತನಾಡಿದರು. ದಾವಣಗೆರೆಯ ಪೂಲ್ ಚಂದ್ ದತ್ತಿ ಕಾರ್ಯಕ್ರಮದಲ್ಲಿ ಕಡದಕಟ್ಟೆ ತಿಮ್ಮಪ್ಪ ಅಕ್ಕಮಹಾದೇವಿ ಬಗ್ಗೆ ವಚನ ಗಾಯನ ನಡೆಸಿ ಕೊಟ್ಟರು.

ಕದಳಿ ಮಹಿಳಾ ವೇದಿಕೆ ತಾಲ್ಲೂಕು ಅಧ್ಯಕ್ಷೆ ಪ್ರತಿಮಾ, ಸಾಹಿತಿ ಸಂಗನಾಳಮಠ, ಶಾರದ ಕಣಗೊಟಗಿ, ಸಿದ್ಧಯ್ಯ, ಮುರುಗೇಂದ್ರಯ್ಯ, ಧನರಾಜ್, ಎನ್.ಎಸ್ ರಾಜು, ಕದಳಿ ವೇದಿಕೆಯ ವೀಣಾ ಸುರೇಶ್, ಸುಮಾ ರವಿ, ಗೀತಾ ಹಿರೇಮಠ, ಚಂದ್ರಕಲಾ, ರಾಜೇಶ್ವರಿ ಇನ್ನಿತರರಿದ್ದರು.

# ಯುವಜನರಲ್ಲಿ ಹೆಚ್ಚುತ್ತಿರುವ ಹೃದಯಾಘಾತ; ನಿರ್ಲಕ್ಷ್ಯ ಬೇಡ



## ವಿವೇಕ ಪೋಷಕರ ಆರೋಗ್ಯ ಕಾರ್ಯಕ್ರಮದಲ್ಲಿ ಡಾ. ಲೋಹಿತಾಶ್ವ ಸಲಹೆ

ದಾವಣಗೆರೆ,ಮೇ 5- ಇತ್ತೀಚಿನ ದಿನಗಳಲ್ಲಿ ಯುವ ಜನರಲ್ಲಿ ಹೃದಯಾಘಾತದ ಸಮಸ್ಯೆಗಳು ಹೆಚ್ಚುತ್ತಿದ್ದು, ಅನೇಕರು ಇದಕ್ಕೆ ಬಲಿಯಾಗುತ್ತಿದ್ದಾರೆ. ಹೃದಯಕ್ಕೆ ಸಂಬಂಧಿಸಿದ ಯಾವುದೇ ಸರಳ ರೋಗ ಲಕ್ಷಣಗಳನ್ನೂ ನಿರ್ಲಕ್ಷಿಸಬಾರದು ಎಂದು ಜೆಜೆಎಂಎಂಸಿ ಸಹ ಪ್ರಾಧ್ಯಾಪಕ ಹೃದಯರೋಗ ತಜ್ಞ ಡಾ.ಎಸ್.ಬಿ. ಲೋಹಿತಾಶ್ವ ಹೇಳಿದರು.

ವಿವೇಕ ಪೋಷಕರ ಆರೋಗ್ಯ ಕಾರ್ಯಾಗಾರದ ಅಡಿಯಲ್ಲಿ ಬಾಪೂಜಿ ಮಕ್ಕಳ ಆಸ್ಪತ್ರೆ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿದರು.

ಹೃದಯಾಘಾತ ಮುಖ್ಯವಾಗಿ ಧೂಮಪಾನ, ಒತ್ತಡ, ಜೀವನಶೈಲಿ ಮತ್ತು ಕುಟುಂಬದ ಇತಿಹಾಸದಿಂದ ಉಂಟಾಗುತ್ತವೆ. ಎದೆ ಉರಿಯಂತಹ ಸರಳ ರೋಗಲಕ್ಷಣಗಳನ್ನು ನಾವು ಸಾಮಾನ್ಯವಾಗಿ ಕಾಣುವ ಗ್ಯಾಸ್ಟ್ರಿಕ್ ಎಂದು ನಿರ್ಲಕ್ಷಿಸಬಾರದು ಮತ್ತು ತಕ್ಷಣವೇ ಹೃದ್ರೋಗ ತಜ್ಞರನ್ನು ಸಂಪರ್ಕಿಸಬೇಕು. ರಕ್ತದ ಸಕ್ಕರೆ, ರಕ್ತದೊತ್ತಡ, ಕೊಲೆಸ್ಟ್ರಾಲ್ ಮತ್ತು ಹೋಮೋಸಿಸ್ಟಿನ್ ನಂತಹ ಮುನ್ನೆಚ್ಚರಿಕೆ ಪರೀಕ್ಷೆಗಳನ್ನು ಮಾಡಿಸಬೇಕು.

ಹೃದಯಾಘಾತದಿಂದ ರಕ್ಷಿಸಿಕೊಳ್ಳಲು ಮತ್ತು ದೈನಂದಿನ ಆರೋಗ್ಯ ತಪಾಸಣೆಗಳನ್ನು ಮಾಡುವಾಗ ಯಾವ ಅಂಶಗಳು ಮತ್ತು ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬುದು ಮುಖ್ಯವಾಗುತ್ತದೆ. ಈ ಹೃದಯಾಘಾತಗಳು ಸಾಮಾನ್ಯವಾಗಿ ಒಬ್ಬ ವ್ಯಕ್ತಿಯ 50 ಅಥವಾ 60ರ ಹರೆಯದಲ್ಲಿ ಸಂಭವಿಸುವ ಸಾಮಾನ್ಯ ಹೃದಯಾಘಾತಗಳಲ್ಲ ಎಂದು ಕಿರಿಯ ವಯಸ್ಸಿನ ಜನರಲ್ಲಿ ನಡೆಸಿದ ಅಧ್ಯಯನವು ಸೂಚಿಸುತ್ತದೆ.

ಕಿರಿಯ ವಯಸ್ಸಿನವರಲ್ಲಿ ತೀರ ವಿಭಿನ್ನ ರೀತಿಯ ಪ್ರಚೋದಕಗಳಾಗಿ ಕಾಣಿಸುತ್ತಿದೆ. ಈ ಪ್ರಕರಣಗಳಲ್ಲಿ ಶೇ.12-13ರಷ್ಟು ಜನರು ಮಧುಮೇಹ ಅಥವಾ ಅಧಿಕ ರಕ್ತದೊತ್ತಡ ಹೊಂದಿದವರಾಗಿದ್ದಾರೆ. ಯುವ ರೋಗಿಗಳಲ್ಲಿ ವೈದ್ಯಕೀಯ ಪ್ರಸ್ತುತಿಯು ಹಿರಿಯರಿಗಿಂತ ಭಿನ್ನ ವಾಗಿರುತ್ತದೆ. ಇದರಿಂದಾಗಿ ಹೆಚ್ಚಿನ ಸಂಖ್ಯೆಯ ಯುವ ರೋಗಿಗಳು ಅನುಭವ ಹೊಂದಿರುವು ದಿಲ್ಲ. ಪ್ರಾಥಮಿಕ ಪರೀಕ್ಷೆಗಳ ನಂತರ, ಅಪಾಯಕಾರಿ ಅಂಶಗಳಿರುವವರು ಹೃದ್ರೋಗ ತಜ್ಞರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು ಮತ್ತು ಇಸಿಜಿ, ಎಕೋಕಾರ್ಡಿಯೋಗ್ರಫಿ ಮತ್ತು ಟಿಎಂಟಿ ಪರೀಕ್ಷೆಗಳಿಗೆ ಒಳಗಾಗಬೇಕು.

ಈ ಅಪಾಯಕಾರಿ ಅಂಶಗಳಿರುವ ಯುವ ಕರು ಹೃದ್ರೋಗ ತಜ್ಞರನ್ನು ನಿಯಮಿತವಾಗಿ ಅನುಸರಿಸಬೇಕು ಮತ್ತು ಹೃದಯ ಕಾಯಿಲೆಯ ಯಾವುದೇ ಆರಂಭಿಕ ಸಂಭವವನ್ನು ತಡೆಗಟ್ಟಬೇಕು ಮತ್ತು ಸುರಕ್ಷಿತ ಮತ್ತು ಆರೋಗ್ಯಕರ ಜೀವನವನ್ನು ಹೊಂದಿರಬೇಕು ಎಂದು ಡಾ. ಲೋಹಿತಾಶ್ವ ಹೇಳಿದರು.

ಈ ಸಂದರ್ಭದಲ್ಲಿ ಬಾಪೂಜಿ ಮಕ್ಕಳ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕ ಡಾ.ಜಿ.ಗುರುಪ್ರಸಾದ್, ಹಿರಿಯ ಮಕ್ಕಳ ತಜ್ಞರಾದ ಡಾ.ಸುರೇಶ್ ಬಾಬು, ಡಾ.ಪ್ರಕಾಶ್ ಎಸ್, ಡಾ.ಸಚಿನ್ ಬಾತಿ, ವ್ಯವಸ್ಥಾಪಕ ಸಿದ್ದೇಶ್ವರ ಗುಬ್ಬಿ ಸೇರಿದಂತೆ ನರ್ಸಿಂಗ್ ವಿದ್ಯಾರ್ಥಿಗಳು, ಪೋಷಕರು ಮತ್ತು ಆಸ್ಪತ್ರೆ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಹರಿಹರ : ಎಂ.ಕೆ.ಇ.ಟಿ, ಸಿ.ಬಿ.ಎಸ್.ಇ ಶಾಲೆಗೆ ಶೇ.100 ಫಲಿತಾಂಶ




ಹರಿಹರ, ಮೇ 14- ನಗರದ ಎಂ.ಕೆ.ಇ.ಟಿ, ಸಿ.ಬಿ.ಎಸ್.ಇ ಶಾಲೆಯ ವಿದ್ಯಾರ್ಥಿಗಳು 2023-24ನೇ ಸಾಲಿನ ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ನಡೆದ ಸಿ.ಬಿ.ಎಸ್.ಇ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ಶೇ.100ರಷ್ಟು ಫಲಿತಾಂಶ ಬಂದಿರುತ್ತದೆ ಎಂದು ಆಡಳಿತ ಮಂಡಳಿಯ ಅಧ್ಯಕ್ಷರು ತಿಳಿಸಿದ್ದಾರೆ.

ಸ್ವರೂಪ್ ಆರ್.ದುರ್ಗೋಜಿ ಶೇ.94.6 ರಷ್ಟು ಅಂಕಗಳನ್ನು ಪಡೆದು ಶಾಲೆಗೆ ಪ್ರಥಮ ಸ್ಥಾನವನ್ನು ಪಡೆದಿರುತ್ತಾನೆ. ಜಿ.ಆರ್. ಕೋಮಲ್ ಮತ್ತು ಮೇಘನ ಟಿ.ಗಂಗೂರ್ ಶೇ.93.8 ರಷ್ಟು ಅಂಕಗಳನ್ನು ಪಡೆದು ದ್ವಿತೀಯ ಸ್ಥಾನ ಪಡೆದಿರುತ್ತಾರೆ. ಎಸ್.ಎಂ. ಸಂಜನಾ ಶೇ.93 ರಷ್ಟು ಅಂಕಗಳನ್ನು ಪಡೆದು ತೃತೀಯ ಸ್ಥಾನವನ್ನು ಪಡೆದು ಶಾಲೆಗೆ ಕೀರ್ತಿ ತಂದಿರುತ್ತಾರೆ.

ಅನಘ ರಘುರಾಮ್ ಶೇ.92.2, ಜಿ.ದಿಗಂತ್ ಶೇ.92.2, ಚಂದನ್ ಆನಂದ್ ಬಡಿಗೇರ್ ಶೇ.91.6 ಅಂಕ ಪಡೆದು ತೇರ್ಗಡೆಯಾಗಿದ್ದಾರೆ.

34 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಶ್ರೇಣಿ, 62 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ, 17 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿ, 5 ವಿದ್ಯಾರ್ಥಿಗಳು ಉತ್ತೀರ್ಣ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ ಎಂದು ಶಾಲೆಯ ಪ್ರಾಂಶುಪಾಲ ಮಂಜುನಾಥ ಕುಲಕರ್ಣಿ ಅವರು ತಿಳಿಸಿದ್ದಾರೆ.

ಶಾಲೆಯ ಆಡಳಿತಾಧಿಕಾರಿಗಳು, ಪ್ರಾಂಶುಪಾಲರು, ಮುಖ್ಯೋಪಾಧ್ಯಾಯಿನಿ, ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರು ಶಾಲೆಗೆ ಕೀರ್ತಿ ತಂದ ವಿದ್ಯಾರ್ಥಿಗಳಿಗೆ ಅಭಿನಂದಿಸಿದ್ದಾರೆ.

## ಗಣಿ ಅವಘಡದಲ್ಲಿ ವಿಚಕ್ಷಣ ಅಧಿಕಾರಿ ಸಾವು

ಜೈಪುರ, ಮೇ 15 – ರಾಜಸ್ಥಾನದ ನೀಮ್ ಕಾ ಥಾಣಾದಲ್ಲಿರುವ ಗಣಿಯ ಲಿಫ್ಟ್ ಕುಸಿದು, ಹಿಂದೂಸ್ತಾನ್ ಕಾಪರ್ ಲಿಮಿಟೆಡ್ (ಹೆಚ್.ಸಿ.ಎಲ್.) ಕಂಪನಿಯ ಮುಖ್ಯ ವಿಚಕ್ಷಣ ಅಧಿಕಾರಿ ಉಪೇಂದ್ರ ಕುಮಾರ್ ಪಾಂಡೆ ನಿಧನರಾಗಿದ್ದಾರೆ. ಇತರೆ 14 ಜನರನ್ನು ರಕ್ಷಿಸಲಾಗಿದ್ದು, ಅವರನ್ನು ಜೈಪುರ ಆಸ್ಪತ್ರೆಗೆ ದಾಖಲಿಸಲಾಗಿದೆ. ಮಂಗಳವಾರ ರಾತ್ರಿ ಅಪಘಾತ ನಡೆದಿದ್ದು, ರಕ್ಷಣಾ ಕಾರ್ಯಾಚರಣೆಗೆ ಹಲವು ಗಂಟೆ ಬೇಕಾಯಿತು. ಕೊಲ್ಕೊತಾದಿಂದ ಬಂದಿದ್ದ ಹೆಚ್.ಸಿ.ಎಲ್. ವಿಚಕ್ಷಣ ದಳ ತಂಡವನ್ನು ಪರಿಶೀಲನೆಗೆ ರವಾನಿಸಲಾಗಿತ್ತು. ಆಗ ಕೇಬಲ್ ಹರಿದು, ಅವರು 1,875 ಅಡಿ ಆಳದಲ್ಲಿ ಸಿಲುಕಿದ್ದರು.

ವಿಚಕ್ಷಣ ತಂಡದಲ್ಲಿ 15 ಜನರಿದ್ದರು. ರಕ್ಷಣಾ ಕಾರ್ಯಾಚರಣೆ ಮೂಲಕ 14 ಜನರನ್ನು ರಕ್ಷಿಸಲು ಸಾಧ್ಯವಾಯಿತಾದರೂ, ಪಾಂಡೆ ಸಾವನ್ನಪ್ಪಿದ್ದಾರೆ.

## ತೆಂಡೂಲ್ಕರ್ ಭದ್ರತೆಗೆ ನಿಯೋಜಿಸಲಾಗಿದ್ದ ಪೊಲೀಸ್ ಪೇದೆ ಆತ್ಮಹತ್ಯೆ

ಮುಂಬೈ, ಮೇ 15 - ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ಅವರ ನಿವಾಸ ದಲ್ಲಿ ಭದ್ರತೆಗೆ ನಿಯೋಜಿಸಲಾಗಿದ್ದ ಪೊಲೀಸ್ ಪೇದೆಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪ್ರಕಾಶ್ ಗೋವಿಂದ ಕಪಡೆ ಅವರು ಮಹಾರಾಷ್ಟ್ರದ ಜಲಗಾಂವ್ ಜಿಲ್ಲೆಯಲ್ಲಿರುವ ತವರೂರಿನಲ್ಲಿ ಸೇವಾ ರಿವಾಲ್ವರ್‌ನಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಪಡೆ ಅವರನ್ನು ಕಳೆದ ವರ್ಷ ತೆಂಡೂಲ್ಕರ್ ಅವರ ಬಾಂದ್ರಾ ನಿವಾಸದಲ್ಲಿ ಭದ್ರತೆಗೆ ನಿಯೋಜಿಸಲಾಗಿತ್ತು.

## ಆಂಧ್ರಪ್ರದೇಶದಲ್ಲಿ ಹಿಂಸಾಚಾರ : ಚುನಾವಣಾ ಆಯೋಗದ ಸಮನ್ಸ್

ನವದೆಹಲಿ, ಮೇ 15 - ಆಂಧ್ರಪ್ರದೇಶದಲ್ಲಿ ಚುನಾವಣೆ ನಂತರ ನಡೆದ ಹಿಂಸಾಚಾರವನ್ನು ಪರಿಗಣಿಸಿರುವ ಚುನಾವಣಾ ಆಯೋಗ, ರಾಜ್ಯದ ಮುಖ್ಯ ಕಾರ್ಯದರ್ಶಿ ಹಾಗೂ ಡಿ.ಜಿ.ಪಿಗೆ ಸಮನ್ಸ್ ಕಳಿಸಿದೆ. ಉಭಯರು ಖುದ್ದು ಹಾಜರಾಗಿ ಘಟನೆಗಳಲ್ಲಿ ಆಡಳಿತಾತ್ಮಕ ವೈಫಲ್ಯ ಆಗಿರುವ ಬಗ್ಗೆ ಮಾಹಿತಿ ನೀಡುವಂತೆ ತಿಳಿಸಿದೆ. ರಾಜ್ಯದಲ್ಲಿ ನೀತಿ ಸಂಹಿತೆ ಈಗಲೂ ಜಾರಿಯಲ್ಲಿದೆ. ಮತ್ತೆ ಇಂತಹ ಘಟನೆಗಳು ಪುನರಾವರ್ತನೆಯಾಗದಂತೆ ನೋಡಿಕೊಳ್ಳಬೇಕು ಎಂದು ತಿಳಿಸಲಾಗಿದೆ.

# ತಾಂತ್ರಿಕ ಸಮಸ್ಯೆ ಬದಿಗಿಟ್ಟು ಬರ ಪರಿಹಾರ ಜಮಾ ಮಾಡಿ



ರಾಣೇಬೆನ್ನೂರು ಮೇ 15- ತಾಂತ್ರಿಕ ಸಮಸ್ಯೆ ಬದಿಗಿಟ್ಟು, ರೈತರ ಖಾತೆಗೆ ಬರ ಪರಿಹಾರದ ಹಣ ಜಮಾ ಆಗುವಂತೆ ಕ್ರಮವಹಿಸಿ ಎಂದು ರೈತ ಮುಖಂಡ ರವೀಂದ್ರಗೌಡ ಎಫ್. ಪಾಟೀಲ ಅವರು ತಹಶೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಆಧಾರ್ ಜೋಡಣೆ ಮಿಸ್ ಮ್ಯಾಚ್ ಸಮಸ್ಯೆಯಿಂದಾಗಿ ರೈತರ ಬ್ಯಾಂಕ್ ಖಾತೆಗೆ ಪರಿಹಾರ ಹಣ ಜಮಾ ಆಗದಿರುವುದು ರೈತರಲ್ಲಿ ಆತಂಕ ಮೂಡಿಸಿದೆ. ರೈತರು ಹೊಸ ತಾಂತ್ರಿಕ ವ್ಯವಸ್ಥೆಗೆ ಹೊಂದಿಕೊಂಡಿಲ್ಲ. ಆದ್ದರಿಂದ ಯಾವುದೇ ದೋಷಗಳಿದ್ದರೂ ಅಧಿಕಾರಿಗಳೇ ಮುಂದೆ ನಿಂತು ಸಮಸ್ಯೆ ಸರಿಪಡಿಸಬೇಕೆಂದು ಒತ್ತಾಯಿಸಿದರು.

ಒಂದು ವಾರದ ಗಡುವು ನೀಡಿದ ಅವರು, ಸಮಸ್ಯೆ ಬಗೆ ಹರಿಯದಿದ್ದರೆ ತಹಶೀಲ್ದಾರ್ ಕಚೇರಿ ಮತ್ತು ಕೃಷಿ ಇಲಾಖೆಗೆ ಬೀಗ ಜಡಿದು ಪ್ರತಿಭಟನೆ ಮೂಲಕ ಹೆದ್ದಾರಿ ತಡೆಯುತ್ತೇವೆಂದು ಎಚ್ಚರಿಕೆ ನೀಡಿದ್ದಾರೆ.

ತಹಶೀಲ್ದಾರ್ ಟಿ. ಸುರೇಶ್, ರೈತರಿಗೆ ಮೋಸ ಮಾಡದೇ ನ್ಯಾಯ ಒದಗಿಸುತ್ತೇವೆ ಎಂದು ಭರವಸೆ ನೀಡಿ ರೈತರನ್ನು ಸಮಾಧಾನ ಪಡಿಸಿದರು.

ಈ ವೇಳೆ ಜಿಲ್ಲಾಧ್ಯಕ್ಷ ಈರಣ್ಣ ಹಲಗೇರಿ, ಸಹಾಯಕ ಕೃಷಿ ನಿರ್ದೇಶಕ ಶಾಂತಮಣಿ, ಕೃಷಿ ಅಧಿಕಾರಿ ಎಂ. ಬಸವರಾಜ, ಅರವಿಂದ, ರೈತ ಮುಖಂಡರಾದ ಚಂದ್ರಣ್ಣ ಬೇಡರ, ಚಂದ್ರಣ್ಣ ಬಣಕಾರ, ಎಸ್. ಹರಿಹರಗೌಡ ಪಾಟೀಲ, ಬಸವರಾಜ ಯಲ್ಲಕ್ಕನವರ, ಕವಿತಾ ಕುಸಗೂರ, ಪುಷ್ಪಾ ಅಂಗಡಿ, ಇಂದ್ರಮ್ಮ ಸಣ್ಣನಿ, ಇಂದಿರಾ ಕಮ್ಮಾರ, ಯಲ್ಲಪ್ಪ ಗಂಧಣ್ಣನವರ ಇತರರು ಇದ್ದರು.

## ರಾಘವೇಂದ್ರ ನಾಯರಿ ಅವರಿಗೆ ಜಿಲ್ಲಾ ಕಸಾಪದಿಂದ ಸನ್ಮಾನ

ದಾವಣಗೆರೆ, ಮೇ 15 - ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಕುವೆಂಪು ಕನ್ನಡ ಭವನದಲ್ಲಿ ಆಯೋಜಿಸಲಾಗಿದ್ದ 'ಕನ್ನಡ ಸಾಹಿತ್ಯ ಪರಿಷತ್ತಿನ 110 ನೇ ಸ್ಥಾಪನಾ ದಿನಾಚರಣೆ'ಯಲ್ಲಿ ಕೆನರಾ ಬ್ಯಾಂಕ್ ಎಂಪ್ಲಾಯೀಸ್ ಯೂನಿಯನ್‌ನ ಅಖಿಲ ಭಾರತ ಕಾರ್ಯದರ್ಶಿಯಾಗಿ ನೂತನವಾಗಿ ನೇಮಕವಾಗಿರುವ ಕೆ.ರಾಘವೇಂದ್ರ ನಾಯರಿಯವರನ್ನು ಅಭಿನಂದಿಸಿ ಸನ್ಮಾನಿಸಲಾಯಿತು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಬಿ.ವಾಮದೇವಪ್ಪ ತಿಳಿಸಿದರು.



## ಮೋದಿ ವೇದಿಕೆಯಲ್ಲಿ ಸಿಗದ ಅವಕಾಶ ಶಿವಸೇನೆ ಮುಖಂಡ ರಾಜೀನಾಮೆ

ಥಾಣೆ, ಮೇ 15 - ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಜೊತೆ ನಡೆದ ಸಮಾವೇಶದಲ್ಲಿ ವೇದಿಕೆ ಹಂಚಿಕೊಳ್ಳಲು ಅವಕಾಶ ನೀಡಲಿಲ್ಲ ಎಂದು ಅಸಮಾಧಾನಗೊಂಡ ಮಹಾರಾಷ್ಟ್ರದ ಮುಖ್ಯಮಂತ್ರಿ ಏಕನಾಥ ಶಿಂಧೆ ನೇತೃತ್ವದ ಶಿವಸೇನೆ ಬಣದ ಸ್ಥಳೀಯ ಮುಖಂಡ ರಾಜೀನಾಮೆ ನೀಡಿದ್ದಾರೆ.

ಥಾಣೆ ಜಿಲ್ಲೆಯ ಕಲ್ಯಾಣ - ಮುರಬಾದ್ ವಿಧಾನಸಭಾ ಕ್ಷೇತ್ರದ ಪಕ್ಷದ ಉಸ್ತುವಾರಿಯಾಗಿರುವ ಅರವಿಂದ ಮೋರೆ ಅವರು ಪಕ್ಷಕ್ಕೆ ರಾಜೀನಾಮೆ ನೀಡಿರುವುದಾಗಿ ಹೇಳಿದ್ದಾರೆ. ಕಲ್ಯಾಣದ ಹಾಲಿ ಸಂಸದ ಶ್ರೀಕಾಂತ್ ಶಿಂಧೆ ಅವರ ಪರವಾಗಿ ಪ್ರಧಾನಿ ಮೋದಿ ಚುನಾವಣಾ ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

## ರಶ್ಮಿ ಶಾಲಾ ಪ್ರವೇಶಕ್ಕೆ ಸಂದರ್ಶನ

ದಾವಣಗೆರೆ, ಮೇ 15- ನಗರದ 'ರಶ್ಮಿ' ಹೆಣ್ಣು ಮಕ್ಕಳ ವಸತಿಯುತ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ಉಚಿತ ಶಾಲಾ ಪ್ರವೇಶಕ್ಕಾಗಿ ಮೇ 19ರ ಬೆಳಗ್ಗೆ 10ಕ್ಕೆ ಸಂದರ್ಶನ ಏರ್ಪಡಿಸಲಾಗಿದೆ. ಅನಾಥ ಹಾಗೂ ಬಡ ಹೆಣ್ಣು ಮಕ್ಕಳು 1ರಿಂದ 9ನೇ ತರಗತಿ ಓದ ಬಯಸಿದರೆ ಸಂದರ್ಶನದಲ್ಲಿ ಪಾಲ್ಗೊಳ್ಳಬಹುದು. ವಿವರಕ್ಕೆ ಸಂಪರ್ಕಿಸಿ. :9916362288

# ರಾಣೇಬೆನ್ನೂರಿನ ಖನ್ನೂರ ವಿದ್ಯಾನಿಕೇತನ ಸ್ಕೂಲ್ ಹಾವೇರಿ ಜಿಲ್ಲೆಗೆ ಪ್ರಥಮ ಸ್ಥಾನ



ರಾಣೇಬೆನ್ನೂರು, ಮೇ 15 - ಪ್ರಸ್ತುತ ಸಾಲಿನ ಸಿ.ಬಿ.ಎಸ್.ಇ 10ನೇ ತರಗತಿ ಫಲಿತಾಂಶ ಪ್ರಕಟವಾಗಿದ್ದು. ಕು, ಕಾವ್ಯ, ಎಂ. ಕೆಂಪಣ್ಣನವರ ಶೇ. 97.4% ರಷ್ಟು ಪಡೆದು ಹಾವೇರಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಕು. ಕಾವ್ಯ ಎಂ ಕೆಂಪಣ್ಣನವರ (ಪ್ರಥಮ) 97.4%, ಕು. ಹರ್ಷಿತಾ ಎನ್ ಕುನಬೇವು (ದ್ವಿತೀಯ) 94%, ಕು. ಆದರ್ಶ ಕೆ ವಾಲೀಕಾರ (ತೃತೀಯ) 90.6%, ವಿದ್ಯಾರ್ಥಿಗಳಿಗೆ ಸಂಸ್ಥೆಯ ಛೇರಮನ್ ಡಾ. ಎಂ. ಪ್ರವೀಣ ಕುಮಾರ ಖನ್ನೂರ, ಸಿ.ಇ.ಓ ಡಾ. ಪಿ. ಶೈಲಶ್ರೀ ಖನ್ನೂರ, ಆಡಳಿತಾ ಧಿಕಾರಿ ನಾಗೇಶ, ಮುರಡಣ್ಣನವರ ಪ್ರಾಂಶುಪಾಲ ಎ. ಮನೀಷ್ ಅಭಿನಂದನೆ ಸಲ್ಲಿಸಿದ್ದಾರೆ.

# ವಯೋನಿವೃತ್ತಿ ಹೊಂದಿದ ಅಧಿಕಾರಿಗಳಿಗೆ ಜಿಲ್ಲಾ ಪೊಲೀಸ್ ಇಲಾಖೆ ಬೀಳ್ಕೊಡುಗೆ





ದಾವಣಗೆರೆ, ಮೇ 15 - ಪೊಲೀಸ್ ಇಲಾಖೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿ ಇಂದು ವಯೋ ನಿವೃತ್ತಿ ಹೊಂದಿದ ಪೊಲೀಸ್ ಅಧಿಕಾರಿಗಳಾದ ಹೊನ್ನಾಳಿ ಪೊಲೀಸ್ ಠಾಣೆಯ ಪಿಎಸ್ಐ ಓ.ಜಿ. ಏಕಾಂತಪ್ಪ ಹಾಗೂ ಸಿಇಎನ್ ಪೊಲೀಸ್ ಠಾಣೆಯ ಪಿಎಸ್ಐ ಕೆ. ನಾಗರಾಜ ಅವರನ್ನು ಜಿಲ್ಲಾ ಪೊಲೀಸ್ ಕಛೇರಿಯಲ್ಲಿ ಪೊಲೀಸ್ ಅಧೀಕ್ಷಕರಾದ ಉಮಾ ಪ್ರಶಾಂತ್ ಅವರು ಜಿಲ್ಲಾ ಪೊಲೀಸ್ ವತಿಯಿಂದ ಸನ್ಮಾನಿಸಿದರು. ನಿವೃತ್ತ ಜೀವನಕ್ಕೆ ಶುಭ ಕೋರಿ ಬೀಳ್ಕೊಟ್ಟರು.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ಕಛೇರಿಯ ಸಹಾಯಕ ಆಡಳಿತಾಧಿಕಾರಿ ಮೆಹಬೂಬ್ ಸೇರಿದಂತೆ ಕಛೇರಿ ಸಿಬ್ಬಂದಿಗಳು ಮತ್ತು ನಿವೃತ್ತ ಅಧಿಕಾರಿಗಳ ಕುಟುಂಬ ವರ್ಗದವರು ಉಪಸ್ಥಿತರಿದ್ದರು.

# ಸ್ವಚ್ಛತೆಯಲ್ಲಿ ಎಡವಿದ ಹರಿಹರದ ಸರ್ಕಾರಿ ಆಸ್ಪತ್ರೆ...!

## ಶುಚಿತ್ವ ಕಾರ್ಯ ವಿಶೇಷ ದಿನಗಳಿಗೆ ಸೀಮಿತವಾಗದೇ ನಿತ್ಯವೂ ಆಗಬೇಕು

ಹರಿಹರ, ಮೇ 15- ಸ್ವಚ್ಛತೆಗೆ ಆದ್ಯತೆ ನೀಡ ಬೇಕಿದ್ದ ಸಾರ್ವಜನಿಕ ತಾಲ್ಲೂಕು ಆಸ್ಪತ್ರೆ, ಇಲ್ಲಿನ ಅಧಿಕಾರಿ ಮತ್ತು ಸಿಬ್ಬಂದಿಗಳ ನಿರ್ಲಕ್ಷ್ಯದಿಂದ ಆಸ್ಪತ್ರೆಯ ಆವರಣ ಸಂಪೂರ್ಣ ಹದಗೆಟ್ಟಿದೆ.

ಹೌದು, ಇಲ್ಲಿನ ಸಾರ್ವಜನಿಕ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ಬರುವಂತಹ ತಾಲ್ಲೂಕು ವ್ಯಾಪ್ತಿಯ ರೋಗಿಗಳು ಇಲ್ಲಿನ ದುಸ್ಥಿತಿ ಗಮನಿಸಿ ತಮ್ಮ ಆರೋಗ್ಯ ಗುಣಮುಖವಾಗುವ ಬಗ್ಗೆ ಚಿಂತಿಸುತ್ತಿದ್ದಾರೆ.

ಎಲ್ಲೆಂದರಲ್ಲಿ ಕಸದ ರಾಶಿ, ಹೂಳು ತುಂಬಿದ ಚರಂಡಿ ಮತ್ತು ಪ್ಲಾಸ್ಟಿಕ್ ಹಾಳೆಗಳಿಂದ ಆಸ್ಪತ್ರೆಯ ಮಡಿಲು ಮಲಿನವಾಗುತ್ತಿದೆ. ವಿಶೇಷ ದಿನಗಳಲ್ಲಿ ಮಾತ್ರ ಆಸ್ಪತ್ರೆಯ ಆವರಣ ಸ್ವಚ್ಛಗೊಳಿಸುವ ಇವರು, ಉಳಿದ ದಿನಗಳಲ್ಲಿ ಶುಚಿಗೊಳಿಸಲು ನಿರಾಸಕ್ತಿ ತೋರುತ್ತಿದ್ದಾರೆ.

ಆಸ್ಪತ್ರೆ ಮುಂಭಾಗದಲ್ಲಿನ ಶುದ್ಧ ಕುಡಿಯುವ ನೀರಿನ ಘಟಕ, ನೀರು ಫಿಲ್ಟರ್‌ಗೊಳಿಸಿ ಹೊರಹಾಕುವ ತ್ಯಾಜ್ಯವನ್ನು ಮರಕ್ಕೆ ನೀರುಣಿಸುವ ನೆಪದಲ್ಲಿ ಬೇಕಾಬಿಟ್ಟಿ ಹರಿಸಿದ್ದರಿಂದ ಆಸ್ಪತ್ರೆಯ ಅಂಗಳ ಕೆಸರುಮಯವಾಗಿದೆ.

ಒಂದೆಡೆ ಹಕ್ಕಿಗಳ ಹಿಕ್ಕೆ ಮತ್ತು ಅದರ ದುರ್ವಾಸನೆಯ ಕಾಟಕ್ಕೆ ಜನರು ಮೂಗು



ಮುಚ್ಚಿಕೊಳ್ಳಬೇಕಾದ ಪ್ರಸಂಗ ಎದುರಾಗಿದ್ದು, ಮರದ ನೆರಳಿನಲ್ಲಿ ಕೂರುವ ಆಸನಗಳು ಗಲೀಜಾಗಿದ್ದು, ಸಾರ್ವಜನಿಕರಿಗೆ ಕೂರದಂತೆ ಎಚ್ಚರಿಸುತ್ತಿವೆ.

**ಹಂದಿಗಳ ತಾಣ :** ಸುಮಾರು 4 ತಿಂಗಳ ಹಿಂದೆಯೇ ಒಡೆದಿದ್ದ ಪೈಪಿನಿಂದ ನಿತ್ಯವೂ ನೀರು ಸೋರಿಕೆಯಾಗುತ್ತಿದ್ದು, ಅಲ್ಲಿ ಹಂದಿಗಳ ಗುಂಪೆ ಮಲಗಿರುತ್ತವೆ ಮತ್ತು ಆ ಕೊಚ್ಚೆ ನೀರಿನಿಂದ ಸೊಳ್ಳೆಗಳ ಕಾಟ ಹೆಚ್ಚುತ್ತಿರುವುದಕ್ಕೆ ಆಸ್ಪತ್ರೆಯ ಜನ ಬೇಸತ್ತಿದ್ದಾರೆ.

**ಉದ್ಯಾನವನವಾಗಿ ಪರಿವರ್ತಿಸಿ:** ಆಸ್ಪತ್ರೆಯ ಮುಂಭಾಗದಲ್ಲಿ ಸಾಕಷ್ಟು ಸ್ಥಳವಿದ್ದು, ಪಾರ್ಕ್ ಮಾಡಲು ಯೋಗ್ಯವಾಗಿದೆ. ಈ ಜಾಗದಲ್ಲಿ ಪಾರ್ಕ್ ವ್ಯವಸ್ಥೆ ಕಲ್ಪಿಸಿದರೆ ಬಿಡುವಿನ ಸಮಯದಲ್ಲಿ ವೈದ್ಯರಿಗೆ ಮತ್ತು ಸಿಬ್ಬಂದಿಗಳಿಗೆ ವಾಕಿಂಗ್ ಮಾಡಲು ಅನುಕೂಲವಾಗಲಿದೆ.

ಸಾರ್ವಜನಿಕ ಹಿತ ಕಾಪಾಡುವ ದೃಷ್ಟಿಯಿಂದ ಸ್ಥಳೀಯ ಶಾಸಕರು ಮತ್ತು ಆಸ್ಪತ್ರೆಯ ಅಧಿಕಾರಿಗಳು ಇಲ್ಲಿನ ಸಮಸ್ಯೆ ಬಗೆಹರಿಸಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ.

### ಬೆಳಕಿನ ಸಂಕಷ್ಟ

**ಆಸ್ಪತ್ರೆಗೆ ರಾತ್ರಿ ವೇಳೆ ಬೆಳಕಿನ ಸಂಕಷ್ಟ ಎದುರಾಗಿದೆ. ಇಲ್ಲಿನ ಎರಡೂ ಬದಿಯ ರಸ್ತೆಗಳಲ್ಲಿ ನಿತ್ಯವೂ ಕತ್ತಲೆ ಆವರಿಸುತ್ತಿದ್ದು, ಈ ಕತ್ತಲೆಯಲ್ಲಿ ಆಸ್ಪತ್ರೆಯೆಡೆಗೆ ಹೆಜ್ಜೆ ಹಾಕಲು ರೋಗಿಗಳು ಹಿಂಜರಿಯುತ್ತಿದ್ದಾರೆ.**

**ಚರಂಡಿ ಸ್ವಚ್ಛತೆ, ಒಡೆದ ಪೈಪ್ ದುರಸ್ತಿ ಹಾಗೂ ಬೀದಿ ದೀಪ ಸರಿಪಡಿಸುವುದಕ್ಕೆ ಪೌರಾಯುಕ್ತರ ಗಮನಕ್ಕೆ ತಂದು ಸಾರ್ವಜನಿಕರಿಗೆ ತೊಂದರೆ ಆಗದಂತೆ ಕ್ರಮ ಕೈಗೊಳ್ಳುತ್ತೇವೆ.**

**- ಡಾ.ಹನುಮಾನಾಯ್ಕ್, ಮುಖ್ಯ ವೈದ್ಯಾಧಿಕಾರಿ**

## ಸಿಂಥೆಟಿಕ್ ಮ್ಯಾಟ್, ಕ್ರಿಕೆಟ್ ವಿಲ್ ನೆಟ್ ಉದ್ಘಾಟನೆ



ದಾವಣಗೆರೆ, ಮೇ 15 - ಯುವ ಕ್ರೀಡಾ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಅವರು ಶುಕ್ರವಾರ ನಗರದ ಹೈಸ್ಕೂಲ್ ಮೈದಾನಲ್ಲಿ ಮಹಿಳಾ ಕ್ರಿಕೆಟ್ ವಿಲ್ ನೆಟ್ ಹಾಗೂ ಸಿಂಥೆಟಿಕ್ ಮ್ಯಾಟ್ ಉದ್ಘಾಟಿಸಿದರು. ಈ ವೇಳೆ ಕ್ರಿಕೆಟ್ ಅಕಾಡೆಮಿಯ ಮುಖ್ಯ ಕೋಚ್ ಗೋಪಾಲ್ ಕೃಷ್ಣ, ತಿಮ್ಮೇಶ್, ಸಹಾಯಕ ಕೋಚ್ ರಮೇಶ್ ನಾಯ್ಕ್ ಮತ್ತು ರೈತ ಸಂಘದ ಜಿಲ್ಲಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್, ಮುರಳಿಧರ್ ಹಾಗೂ ಪಾಲಕರು ಇದ್ದರು.

## ರಾಣೇಬೆನ್ನೂರು : ಪಾದಚಾರಿ ಮಾರ್ಗ ತೆರವಿಗೆ ನಾಗರಿಕ ಹಿತರಕ್ಷಕ ವೇದಿಕೆ ಆಗ್ರಹ

ರಾಣೇಬೆನ್ನೂರು, ಮೇ 15 - ನಗರದ ಅಶೋಕ ವೃತ್ತದಿಂದ ಚರ್ಚ್ ರಸ್ತೆ, ಮೆಡ್ಲೇರಿ ಕ್ರಾಸ್‌ನಿಂದ ಎಡಿಬಿ ಕ್ರಾಸ್ ಹಾಗೂ ಅಂಚೆ ಕಛೇರಿ ಹಿಂಭಾಗದಲ್ಲಿ ಪಾದಚಾರಿ ರಸ್ತೆಯನ್ನು ಅತಿಕ್ರಮಣ ಮಾಡಿದ್ದು, ಪಾದಚಾರಿಗಳ ಸಂಚಾರಕ್ಕೆ ತೀವ್ರ ತೊಂದರೆ ಆಗುತ್ತಿದ್ದು, ನಗರಸಭೆಯವರು ತಕ್ಷಣ ಕ್ರಮಕೈಗೊಳ್ಳುವಂತೆ ಇಲ್ಲಿನ ನಾಗರಿಕ ಹಿತರಕ್ಷಕ ವೇದಿಕೆ ಒತ್ತಾಯಿಸಿದೆ.

ನಗರದಾದ್ಯಂತ ಇಂತಹ ಪ್ರಕರಣಗಳಿದ್ದು, ನಗರಸಭೆ ಎಲ್ಲಾ ಅತಿಕ್ರಮಣಗಳ ವಿರುದ್ಧ ಹಂತ - ಹಂತವಾಗಿ ಹೋರಾಟ ಮಾಡಲು ವೇದಿಕೆ ಸಜ್ಜಾಗಿದ್ದು, ಜನಪರ ಚಿಂತನೆಯ ನಮ್ಮ ಹೋರಾಟಕ್ಕೆ ಸಾರ್ವಜನಿಕರು ಹಾಗೂ ಅಧಿಕಾರಿಗಳು ಸಹಕಾರ ನೀಡಬೇಕು ಎಂದು ಡಾ. ಎಸ್.ಎಲ್.ಪವಾರ ಹಾಗೂ ಡಾ. ಗಿರೀಶ್ ಕೆಂಚಪ್ಪನವರ ಮನವಿ ಮಾಡಿದ್ದಾರೆ.

# ದಕ್ಷಿಣ ಶಿಕ್ಷಕರ ಕ್ಷೇತ್ರಕ್ಕೆ ಜೆಡಿಎಸ್‌ನಿಂದ ವಿವೇಕಾನಂದ ಕಣಕ್ಕೆ

ಬೆಂಗಳೂರು, ಮೇ 15 - ದಕ್ಷಿಣ ಶಿಕ್ಷಕರ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿಯಾಗಿ ಜೆಡಿಎಸ್‌ನ ಕೆ.ವಿವೇಕಾನಂದ ಅವರನ್ನು ಅಧಿಕೃತವಾಗಿ ಘೋಷಿಸಲಾಗಿದೆ.

ಜೆಡಿಎಸ್‌ನ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರು ಇಂದು ವಿವೇಕಾನಂದ ಅವರಿಗೆ 'ಬಿ' ಫಾರಂ ನೀಡುವ ಮೂಲಕ ಹಲವು ವಿವಾದಗಳಿಗೆ ತೆರೆ ಎಳೆದಿದ್ದಾರೆ.

ವಿವೇಕಾನಂದ ಮತ್ತು ಮಾಜಿ ವಿಧಾನ ಪರಿಷತ್ ಸದಸ್ಯ ಶ್ರೀಕಂಠೇಗೌಡ ಅವರ ನಡುವೆ ಟಿಕೆಟ್‌ಗೆ ಪೈಪೋಟಿ ನಡೆದಿತ್ತು. ಈ ಸಮಯದಲ್ಲೇ ಬಿಜೆಪಿಯ ರಾಷ್ಟ್ರೀಯ ನಾಯಕರು ದಕ್ಷಿಣ ಕ್ಷೇತ್ರವನ್ನು ತಮ್ಮಲ್ಲೇ ಉಳಿಸಿಕೊಂಡಿದ್ದರು.

ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರ ಜೊತೆ ಸಮಾಲೋಚನೆ ನಡೆಸಿದ ನಂತರ ಹಿಂದೆ ನಡೆದ ಕರಾರಿನಂತೆ ದಕ್ಷಿಣ ಕ್ಷೇತ್ರ ಸೇರಿದಂತೆ ಎರಡು ಕ್ಷೇತ್ರಗಳನ್ನು ಮಿತ್ರ ಪಕ್ಷಕ್ಕೆ ಬಿಟ್ಟು ಉಳಿದ ನಾಲ್ಕನ್ನು ಬಿಜೆಪಿ ಉಳಿಸಿಕೊಂಡಿತ್ತು.

ಜೆಡಿಎಸ್‌ಗೆ ದಕ್ಷಿಣ ಕ್ಷೇತ್ರ ದಕ್ಕುತ್ತಿದ್ದಂತೆ ಮಂಡ್ಯ ಹಾಗೂ ಮೈಸೂರು ಮುಖಂಡರುಗಳು ತಮ್ಮ ಜಿಲ್ಲೆಯವರೇ ಅಭ್ಯರ್ಥಿ ಆಗಬೇಕೆಂದು ವರಿಷ್ಠರ ಮುಂದೆ ಪಟ್ಟು ಹಿಡಿದಿದ್ದರು.

ಪಕ್ಷದ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ. ದೇವೇಗೌಡರ ಮಾತಿಗೆ ಮಣಿದ ಗೌಡರು, ವಿವೇಕಾನಂದ ಅವರಿಗೆ ಟಿಕೆಟ್ ನೀಡಿದ್ದಾರೆ. ಇದರ ಬೆನ್ನಲ್ಲೇ ಮತ್ತೊಬ್ಬ ಆಕಾಂಕ್ಷಿ ಶ್ರೀಕಂಠೇಗೌಡ ಬಂಡಾಯ ಸಾರುವ ಮುನ್ಸೂಚನೆ ನೀಡಿದ್ದಾರೆ.

ಪದವಿ ಹಾಗೂ ಶಿಕ್ಷಕರ ಆರು ಕ್ಷೇತ್ರಗಳಿಗೆ ನಡೆಯುತ್ತಿರುವ ಚುನಾವಣೆಗೆ ನಾಮಪತ್ರ ಸಲ್ಲಿಸಲು ನಾಳೆ ಕಡೆಯ ದಿನವಾಗಿದೆ. ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಕಳೆದ ಬಾರಿ ಜೆಡಿಎಸ್‌ನಿಂದ ಆಯ್ಕೆಗೊಂಡಿದ್ದ ಮರಿತಿಬ್ಬೇಗೌಡ, ಈ ಬಾರಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದಾರೆ.

ಮೈಸೂರು, ಮಂಡ್ಯ, ಹಾಸನ ಹಾಗೂ ಚಾಮರಾಜನಗರ ಜಿಲ್ಲಾ ವ್ಯಾಪ್ತಿಯನ್ನು ಒಳಗೊಂಡಿರುವ ಈ ಕ್ಷೇತ್ರದಲ್ಲಿ ಈ ಬಾರಿ ಬಿಜೆಪಿ ಮತ್ತು ಜೆಡಿಎಸ್ ಒಂದಾಗಿ ಕಾಂಗ್ರೆಸ್ ಅಭ್ಯರ್ಥಿಯನ್ನು ಎದುರಿಸಲಿದ್ದಾರೆ.

# ಸಮಾಜ ತಿದ್ದಲು ಸಮಾಜಮುಖಿ ಕವಿತೆ ಅವಶ್ಯ



ದಾವಣಗೆರೆ, ಏ.22- ಸಮಾಜಮುಖಿ ಕವಿತೆಗಳು ಸಮಾಜದ ಅಂಕು-ಡೊಂಕು ತಿದ್ದುವಲ್ಲಿ ಬಹುಮುಖ್ಯ ಪಾತ್ರ ವಹಿಸಲಿವೆ ಎಂದು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ರಾಜಶೇಖರ್ ಗುಂಡಗಟ್ಟಿ ಹೇಳಿದರು.

ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಮತ್ತು ಭಾವಸಿರಿ ಪ್ರಕಾಶನದ ಸಂಯುಕ್ತಾಶ್ರಯದಲ್ಲಿ ವಿನೋಬ ನಗರದ ಸಿದ್ದಿವಿನಾಯಕ ಸಾಂಸ್ಕೃತಿಕ ಶಾಲೆಯಲ್ಲಿ ಭಾನುವಾರ ನಡೆದ ಯುಗಾದಿ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕವಿತೆಗಳು ಸಮಾಜ ಮುಖಿಯಾಗಿರಬೇಕು, ಸಮಾಜದಲ್ಲಿ ನಡೆಯುವ ಸನ್ನಿವೇಶಗಳನ್ನು ಕವಿತೆಗಳ ರೂಪದಲ್ಲಿ ರಚಿಸುವಂತೆ ಯುವ ಕವಿಗಳಿಗೆ ಸಲಹೆ ನೀಡಿದರು.

ಅಭಾಸಾಪ ಜಿಲ್ಲಾ ಕಾರ್ಯದರ್ಶಿ ಅಣಬೇರು ತಾರೇಶ್ ಪ್ರಾಸ್ತಾವಿಕವಾಗಿ ಮಾತನಾಡಿ, ಕವಿಗೋಷ್ಠಿಗಳಿಗೆ ಅರ್ಥ ಬರಬೇಕೆಂದರೆ ಕವಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸೇರಬೇಕು. ಆಗ ಮಾತ್ರ ಕವಿಗೋಷ್ಠಿ ಯಶಸ್ವಿ ಆಗಲು ಸಾಧ್ಯ ಎಂದರು.

ಶಿವಯೋಗಿ ಹಿರೇಮಠ್, ಮಲ್ಲಮ್ಮ ನಾಗರಾಜ್, ಲಲಿತ್ ಕುಮಾರ್ ಜೈನ್, ಉಷಾ, ಸುಶೀಲಾ ಹಿರೇಮಠ್. ಶ್ಯಾಮಲಾದೇವಿ, ಜಯರಾಮನ್, ಅಭಾಸಾಪದ ಪ್ರಶಾಂತ್, ಮಹಾಂತೇಶ್, ಪೂಜಾ, ಶಿವಮೂರ್ತಿ, ಪರಮೇಶ್ವರಪ್ಪ ಕತ್ತಿಗೆ, ಅಜಯ್ ನಾರಾಯಣ್ ಮತ್ತು ಇತರರು ಇದ್ದರು.

ಸುನೀತಾ ಪ್ರಕಾಶ್ ಸ್ವಾಗತಿಸಿದರು. ಉಮಾದೇವಿ ಹಿರೇಮಠ್ ನಿರೂಪಿಸಿದರು. ಕೆ.ಎಮ್. ಅಮರೇಶ್ ವಂದಿಸಿದರು.

# ನೆದರ್‌ಲ್ಯಾಂಡ್ಸ್‌ನಲ್ಲಿ ತೀವ್ರ ಬಲಪಂಥೀಯ ಸರ್ಕಾರ

ಬ್ರುಸೆಲ್ಸ್, ಮೇ 15 - ಇಸ್ಲಾಂ ವಿರೋಧಿ ಹೇಳಿಕೆಗಳಿಗೆ ಹೆಸರಾಗಿರುವ ಗೀರ್ಟ್ ವೈಲ್ಡರ್ಸ್ ಅವರು ನೆದರ್‌ಲ್ಯಾಂಡ್ಸ್‌ನ ನೂತನ ಸರ್ಕಾರ ರಚಿಸುವ ಹಾದಿಯಲ್ಲಿದ್ದಾರೆ. ವೈಲ್ಡರ್ಸ್ ಸರ್ಕಾರ ರಚನೆಯಾದಲ್ಲಿ ಇದು ಯುರೋಪ್ ಒಕ್ಕೂಟದ ಅತ್ಯಂತ ಬಲಪಂಥೀಯ ಸರ್ಕಾರವಾಗಲಿದೆ.

ವೈಲ್ಡರ್ಸ್ ಅವರೇ ಪ್ರಧಾನ ಮಂತ್ರಿಯಾಗುವ ಸಾಧ್ಯತೆ ಇಲ್ಲ. ಆದರೆ, ಅವರ ಪಾರ್ಟಿ ಫಾರ್ ಫ್ರೀಡಂ ಪಕ್ಷ, ಮೈತ್ರಿಕೂಟದಲ್ಲಿ ಪ್ರಬಲವಾಗಿರಲಿದೆ. ನೆದರ್‌ಲ್ಯಾಂಡ್ಸ್ ಚುನಾವಣೆಯಲ್ಲಿ ವೈಲ್ಡರ್ಸ್ ಅವರ ಪಕ್ಷ 150 ಸ್ಥಾನಗಳ ಪೈಕಿ 37ರಲ್ಲಿ ಗೆಲುವು ಸಾಧಿಸಿತ್ತು. ವೈಲ್ಡರ್ಸ್ ಜೊತೆಗಿನ ನಾಲ್ಕು ಪಕ್ಷಗಳ ಮೈತ್ರಿಕೂಟ 88 ಸ್ಥಾನಗಳನ್ನು ಹೊಂದಿದ್ದು, ಸರ್ಕಾರ ರಚಿಸುವುದು ಸುಲಭವಾಗಿದೆ.

# ಮೇ 31ರಂದು ಕೇರಳಕ್ಕೆ ಮುಂಗಾರು



ನವದೆಹಲಿ, ಮೇ 15 – ಮುಂಗಾರು ಮಾರುತಗಳು ಈ ಬಾರಿ ಮೇ 31 ರಂದು ಕೇರಳಕ್ಕೆ ತಲುಪಲಿವೆ ಎಂದು ಹವಾಮಾನ ಇಲಾಖೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಈ ವರ್ಷ ಮುಂಗಾರು ಮೇ 31ರಂದು ಕೇರಳಕ್ಕೆ ತಲುಪಲಿದೆ. ಇದರಲ್ಲಿ ನಾಲ್ಕು ದಿನಗಳ ವ್ಯತ್ಯಾಸವಾಗುವ ಸಾಧ್ಯತೆ ಇದೆ ಎಂದು ತಿಳಿಸಲಾಗಿದೆ. ಈ ಬಾರಿ ಮುಂಗಾರು ಅವಧಿಗೆ ಮುಂಚೆ ಬರುತ್ತಿಲ್ಲ. ಸಾಮಾನ್ಯ ಸಮಯಕ್ಕೆ ಹತ್ತಿರವಾಗಿಯೇ ಬರುತ್ತಿದೆ ಎಂದು ಹವಾಮಾನ ಇಲಾಖೆಯ ಪ್ರಧಾನ ನಿರ್ದೇಶಕ ಮೃತ್ಯುಂಜಯ ಮೊಹಾಪಾತ್ರ ಹೇಳಿದ್ದಾರೆ.

ಹವಾಮಾನ ಇಲಾಖೆಯ ಮಾಹಿತಿ ಪ್ರಕಾರ ಮೇ 11, 1918ರಂದು ಅತಿ ಬೇಗನೆ ಮುಂಗಾರು ಆಗಮನವಾಗಿತ್ತು. ಜೂನ್ 18, 1972ರಂದು ಮುಂಗಾರು ಆಗಮನ ಅತ್ಯಂತ ವಿಳಂಬವಾಗಿತ್ತು. ಕಳೆದ ವರ್ಷ ಜೂನ್ 8ರಂದು ಮುಂಗಾರು ಕೇರಳಕ್ಕೆ ತಲುಪಿತ್ತು. 2022ರಲ್ಲಿ ಮೇ 29 ಹಾಗೂ 2021ರಲ್ಲಿ ಜೂನ್ 3ರಂದು ಮುಂಗಾರು ಕೇರಳಕ್ಕೆ ಆಗಮಿಸಿತ್ತು. ಈ ಬಾರಿ ಮುಂಗಾರು ಮಳೆಯ ಪ್ರಮಾಣ ಸಾಮಾನ್ಯಕ್ಕಿಂತ ಹೆಚ್ಚಾಗಿರಲಿದೆ ಎಂದು ಹವಾಮಾನ ಇಲಾಖೆ ಕಳೆದ ತಿಂಗಳು ಮುನ್ಸೂಚನೆ ನೀಡಿತ್ತು.

ದೇಶದ ಹಲವು ಭಾಗಗಳಲ್ಲಿ ಏಪ್ರಿಲ್ ತಿಂಗಳಲ್ಲಿ ಬಿರು ಬಿಸಿಲು ಕಾಣಿಸಿಕೊಂಡಿತ್ತು. ಹಲವು ರಾಜ್ಯಗಳಲ್ಲಿ ಗರಿಷ್ಠ ತಾಪಮಾನ ದಾಖಲೆಯ ಮಟ್ಟ ಮೀರಿತ್ತು. ಇದರಿಂದಾಗಿ ಪವರ್ ಗ್ರಿಡ್‌ಗಳ ಮೇಲಿನ ಒತ್ತಡ ಹೆಚ್ಚಾಗಿತ್ತು. ದೇಶದ ಕೆಲ ಭಾಗಗಳಲ್ಲಿ ಬರ ಪರಿಸ್ಥಿತಿ ಉಂಟಾಗಿತ್ತು.

# ಬಿಎಸ್‌ವೈಗೆ ಪೋಕ್ಸೋ ಕಾಟ

**(1ನೇ ಪುಟದಿಂದ)** ತನಿಖಾಧಿಕಾರಿಗಳು ಕೆಲವು ವಿಡಿಯೊಗಳನ್ನು ವಶ ಪಡಿಸಿಕೊಂಡಿದ್ದು, ಜೊತೆಗೆ ಕೆಲವರ ಹೇಳಿಕೆಗಳನ್ನೂ ದಾಖಲಿಸಿಕೊಂಡಿದ್ದಾರೆ. ದೂರು ಕೊಟ್ಟ ಮಹಿಳೆಗೆ ಮಾನಸಿಕ ಸಮಸ್ಯೆ ಇದೆ ಎಂದು ಕೆಲವರು ಹೇಳಿದ್ದಾರೆ. ಅವರು ಲೈಂಗಿಕ ಕಿರುಕುಳದ ಬಗ್ಗೆ ದೂರು ನೀಡಿದ್ದಾರೆ. ಎಲ್ಲಾ ಕೋನಗಳಿಂದಲೂ ತನಿಖೆ ನಡೆಸಿ ಪೊಲೀಸರು ಕ್ರಮ ಕೈಗೊಳ್ಳಲಿದ್ದಾರೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಈ ಹಿಂದೆ ಪ್ರತಿಕ್ರಿಯಿಸಿದ್ದರು.

# ಡಿಪ್ಲೋಮಾ ಪ್ರವೇಶಕ್ಕೆ ಅರ್ಜಿ

ದಾವಣಗೆರೆ, ಮೇ 15 - ಪ್ರಸಕ್ತ ಸಾಲಿನ ರಾಜ್ಯದ ಸರ್ಕಾರಿ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಪ್ರಥಮ ವರ್ಷದ ಡಿಪ್ಲೋಮಾ ಪ್ರವೇಶಕ್ಕೆ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕನಿಷ್ಠ ಶೇ.35 ಅಂಕಗಳನ್ನು ಪಡೆದಿರುವ ಅಭ್ಯರ್ಥಿಗಳಿಂದ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಯನ್ನುwww.dte.kar.nic.in ಅಥವಾ www.kea.kar.nic.in ವೆಬ್ ಸೈಟ್ ಮೂಲಕ ಅರ್ಜಿ ಪಡೆದು ಅಗತ್ಯ ದಾಖಲಾತಿಗಳೊಂದಿಗೆ ಇದೇ ದಿನಾಂಕ 21ರೊಳಗಾಗಿ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಪ್ರಾಂಶುಪಾಲರು, ಡಿ.ಆರ್.ಆರ್ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು, ದಾವಣಗೆರೆ ಇವರನ್ನು ಸಂಪರ್ಕಿಸಲು ಕೋರಲಾಗಿದೆ.

# ವಿಮಾನಯಾನ ದರ ನಿಯಂತ್ರಣಕ್ಕೆ ಹೈಕೋರ್ಟ್ ನಕಾರ

ನವದೆಹಲಿ, ಮೇ 15 – ವೈಮಾನಿಕ ವಲಯ ಅತ್ಯಂತ ಸ್ಪರ್ಧಾತ್ಮಕವಾಗಿದೆ. ಕಂಪನಿಗಳು ಭಾರೀ ನಷ್ಟದಲ್ಲಿವೆ. ಈ ಸಂದರ್ಭದಲ್ಲಿ ಪ್ರಯಾಣ ದರಗಳ ಮೇಲೆ ಮಿತಿ ಹೇರುವುದು ಸೂಕ್ತವಾಗದು ಎಂದು ದೆಹಲಿ ಹೈಕೋರ್ಟ್ ಹೇಳಿದೆ

ಟಿಕೆಟ್ ದರವನ್ನು ಮಾರುಕಟ್ಟೆ ಶಕ್ತಿಗಳು ನಿರ್ಧರಿಸುತ್ತವೆ. ಈಗ ಉದ್ಯಮ ಉತ್ತಮವಾಗಿ ಕೆಲಸ ಮಾಡುತ್ತಿದೆ. ವೈಮಾನಿಕ ವಲಯ ಅತ್ಯಂತ ಸ್ಪರ್ಧಾತ್ಮಕವಾಗಿದೆ. ಈಗಿನ ಕಾಲದಲ್ಲಿ ಆಟೋ ರಿಕ್ಷಾ ದರಗಳು ವಿಮಾನಯಾನಕ್ಕಿಂತ ದುಬಾರಿಯಾಗಿವೆ ಎಂದು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಮನಮೋಹನ್ ಹಾಗೂ ನ್ಯಾಯಮೂರ್ತಿ ಮನ್‌ಮೀತ್ ಪಿ.ಎಸ್. ಅರೋರಾ ಅವರನ್ನು ಒಳಗೊಂಡ ಪೀಠ ಹೇಳಿದೆ.

ವಿಮಾನಯಾನದ ಟಿಕೆಟ್ ದರದ ಮೇಲೆ ನಿಯಂತ್ರಣ ಹೇರಬೇಕು ಎಂದು ದಾಖಲಿಸಿದ್ದ ಎರಡು ಅರ್ಜಿಗಳನ್ನು ತಳ್ಳಿ ಹಾಕುವಾಗ ಹೈಕೋರ್ಟ್ ಈ ನಿಲುವು ತಳೆದಿದೆ.

ವಿಮಾನಯಾನ ವಲಯವು ಅತ್ಯಂತ ನಿಯಂತ್ರಿತವಾಗಿದೆ. ಇದನ್ನು ಇನ್ನಷ್ಟು ನಿಯಂತ್ರಣಕ್ಕೆ ಒಳಪಡಿಸುವ ಅಗತ್ಯವಿಲ್ಲ. ಉತ್ತಮವಾಗಿ ಕೆಲಸ ಮಾಡುವ ಉದ್ಯಮಗಳಲ್ಲಿ ಮಧ್ಯ ಪ್ರವೇಶಿಸಬಾರದು ಎಂದು ಹೈಕೋರ್ಟ್ ಹೇಳಿದೆ.

ವಕೀಲರ ಅಮಿತ್ ಸಾಹ್ನಿ ಹಾಗೂ ಗ್ರಾಹಕರ ಹಕ್ಕುಗಳ ಕಾರ್ಯಕರ್ತ ಬೆಜೊನ್ ಮಿಶ್ರ ಅವರು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿ, ದೇಶಾದ್ಯಂತ ವಿಮಾನಯಾನ ದರಗಳ ಮೇಲೆ ಕಡಿವಾಣ ಹಾಕಬೇಕು ಎಂದು ಕೋರಿದ್ದರು.

ಈ ಅರ್ಜಿಯನ್ನು ವಿರೋಧಿಸಿದ್ದ ವೈಮಾನಿಕ ನಿಯಂತ್ರಕವಾದ ಡಿ.ಜಿ.ಸಿ.ಎ., ವಿಮಾನಯಾನ ದರಗಳು ಮಾರ್ಗಗಳ ಮೇಲೆ ನಿರ್ಧಾರವಾಗುತ್ತವೆ. ಕೆಲ ಮಾರ್ಗಗಳಲ್ಲಿ ಕೆಲವೇ ಪ್ರಯಾಣಿಕರಿರುತ್ತಾರೆ, ಆದರೂ ವಿಮಾನ ಚಲಾಯಿಸಬೇಕಾಗುತ್ತದೆ ಎಂದರು.

# ಸೈನ್ಯದಲ್ಲಿ ವರ್ಗ ಭೇದ ಎಂದ ರಾಹುಲ್ ವಿರುದ್ಧ ದೂರು

ನವದೆಹಲಿ, ಮೇ 15 – ಸೈನ್ಯದಲ್ಲಿ ಬಡವರು ಹಾಗೂ ಶ್ರೀಮಂತ ಕುಟುಂಬಗಳಿಗೆ ಪ್ರತ್ಯೇಕ ವರ್ಗಗಳಿವೆ ಎಂದು ಹೇಳಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ಚುನಾವಣಾ ಆಯೋಗದ ಬಳಿ ಬಿಜೆಪಿ ದೂರು ದಾಖಲಿಸಿದೆ.

ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್, ಕೇಂದ್ರ ಸಚಿವರಾದ ಅರ್ಜುನ್ ರಾಮ್ ಮೇಘ್ವಾಲ್ ಹಾಗೂ ರಾಜೀವ್ ಚಂದ್ರಶೇಖರ್ ಅವರನ್ನು ಒಳಗೊಂಡ ನಿಯೋಗ ದೂರು ದಾಖಲಿಸಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಸೈನ್ಯದಲ್ಲಿ ಎರಡು ರೀತಿಯ ಸೈನಿಕರನ್ನು ಸೃಷ್ಟಿಸಿದ್ದಾರೆ. ಒಂದರಲ್ಲಿ ಬಡವರು, ದಲಿತರು, ಆದಿವಾಸಿ, ಹಿಂದುಳಿದವರು, ಆರ್ಥಿಕವಾಗಿ ದುರ್ಬಲರು ಹಾಗೂ ಅಲ್ಪಸಂಖ್ಯಾತರಿದ್ದಾರೆ. ಮತ್ತೊಂದರಲ್ಲಿ ಶ್ರೀಮಂತರ ಮಕ್ಕಳಿದ್ದಾರೆ ಎಂದು ರಾಹುಲ್ ಗಾಂಧಿ ಕೆಲ ದಿನಗಳ ಹಿಂದೆ ಹೇಳಿದ್ದರು ಎಂದು ಜೈಶಂಕರ್ ತಿಳಿಸಿದ್ದಾರೆ.

ಇದು ಸುಳ್ಳು. ಈ ಹೇಳಿಕೆ ನಮ್ಮ ಸೈನಿಕ ಪಡೆಗಳ ಮೇಲೆ ನಡೆಸಿದ ದಾಳಿ. ರಾಹುಲ್ ಗಾಂಧಿ ವಿವಾದ ಸೃಷ್ಟಿಸುವ ಹಾಗೂ ಸೈನಿಕರ ಸ್ಥೈರ್ಯ ಕುಸಿಯುವಂತೆ ಮಾಡುವ ಪ್ರಯತ್ನ ನಡೆಸಿದ್ದಾರೆ. ಇದು ಚುನಾವಣಾ ವಿಷಯವಲ್ಲ, ಇದು ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ವಿಷಯ ಎಂದು ಸಚಿವರು ಹೇಳಿದ್ದಾರೆ.

ರಾಯ್‌ಬರೇಲಿಯಲ್ಲಿ ಇತ್ತೀಚೆಗೆ ನಡೆದ ಸಮಾವೇಶದಲ್ಲಿ ಮಾತನಾಡಿದ್ದ ರಾಹುಲ್ ಗಾಂಧಿ, ಸೈನ್ಯದ ಅಗ್ನಿಪಥ್ ನೇಮಕ ಯೋಜನೆಯನ್ನು ಟೀಕಿಸಿದ್ದರು.

ರಾಹುಲ್ ಗಾಂಧಿ ಹೇಳಿಕೆ ಅತ್ಯಂತ ಗಂಭೀರವಾಗಿದೆ. ಇದನ್ನು ಚುನಾವಣಾ ಆಯೋಗದ ಗಮನಕ್ಕೆ ತರಲಾಗಿದೆ. ರಾಹುಲ್ ಗಾಂಧಿ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಹಾಗೂ ಅವರು ಹೇಳಿಕೆ ವಾಪಸ್ ಪಡೆಯಬೇಕು ಎಂದರು.

# ಇನ್ನೂ ವಾಪಸ್ಸಾಗದ ಪ್ರಜ್ವಲ್

**(1ನೇ ಪುಟದಿಂದ)** ಅಧಿಕಾರಿಗಳು ಬಲವಂತವಾಗಿ ಆ ದೇಶದಿಂದ ಕರೆತರಲು ಸಾಧ್ಯವಿಲ್ಲ. ಆದ್ದರಿಂದ ಮನವೊಲಿಸಿ ರಾಷ್ಟ್ರಕ್ಕೆ ಕರೆತರುವ ಮೊದಲ ಪ್ರಯತ್ನದಲ್ಲಿ ವಿಫಲವಾಗಿದ್ದಾರೆ.

ಪ್ರಜ್ವಲ್ ಜೊತೆ ಮತ್ತೊಬ್ಬ ಸ್ನೇಹಿತರಿರುವನೆಂದು ಹೇಳಲಾಗಿದ್ದು, ಆತ ಯಾರು ಎಂಬ ಬಗ್ಗೆ ಖಚಿತ ಮಾಹಿತಿ ಇಲ್ಲ.

ಇದರ ನಡುವೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ತಮ್ಮ ಕುಟುಂಬದವರ ಮೇಲೆ ಬಂದಿರುವ ಆರೋಪಕ್ಕೆ ಸಂಬಂಧಿಸಿದಂತೆ ಹೈಕೋರ್ಟ್‌ನ ಖ್ಯಾತ ಹಿರಿಯ ವಕೀಲರುಗಳನ್ನು ಮನೆಗೆ ಕರೆಸಿಕೊಂಡು ಸಲಹೆ ಪಡೆದುಕೊಂಡಿದ್ದಾರೆ.

ಅವರ ಸಲಹೆಯಂತೆ ಪುತ್ರ ರೇವಣ್ಣ ವಿರುದ್ಧ ಎಸ್‌ಐಟಿ ಸಲ್ಲಿಸಿರುವ ಚಾರ್ಜ್‌ಶೀಟ್ ಅನ್ನು ರದ್ದು ಮಾಡುವಂತೆ ಹೈಕೋರ್ಟ್‌ನ ಮೊರೆ ಹೋಗಲು ತೀರ್ಮಾನ ಕೈಗೊಂಡಿದ್ದಾರೆ.

ಅಪಹರಣ ಪ್ರಕರಣಕ್ಕೆ ಸಂಬಂಧಿಸಿದಂತೆ ರೇವಣ್ಣ ಅವರನ್ನು ಎಸ್‌ಐಟಿ ಅವರು ಬಂಧಿಸಿ ಜೈಲಿಗೆ ಕಳುಹಿಸಿದ್ದರು, ನಿನ್ನೆಯಷ್ಟೇ ರೇವಣ್ಣ ಪರಪ್ಪನ ಅಗ್ರಹಾರ ಕಾರಾಗೃಹದಿಂದ ಹೊರಬಂದಿದ್ದಾರೆ.

ತಂದೆಯ ಜೊತೆ ರೇವಣ್ಣ ಕೂಡ ಕಾನೂನು ತಜ್ಞರೊಂದಿಗೆ ಸಮಾಲೋಚನೆ ನಡೆಸಿದ್ದಾರೆ. ಈ ಸಂದರ್ಭದಲ್ಲಿ ಲೈಂಗಿಕ ದೌರ್ಜನ್ಯ ಆರೋಪ ಹೊತ್ತಿರುವ ಪ್ರಜ್ವಲ್‌ನನ್ನು ಸುರಕ್ಷಿತವಾಗಿ ರಾಷ್ಟ್ರಕ್ಕೆ ಕರೆತಂದು ಪೊಲೀಸರಿಗೆ ಶರಣಾಗಿಸುವ ಬಗ್ಗೆಯೂ ಸಲಹೆ ಪಡೆದಿದ್ದಾರೆನ್ನಲಾಗಿದೆ.

ಪೊಲೀಸರು ಪ್ರಜ್ವಲ್‌ನನ್ನ ವಶಕ್ಕೆ ಪಡೆದ ನಂತರ ಕುಟುಂಬದವರಾಗಿ ಯಾವ ರೀತಿ ಕಾನೂನು ಹೋರಾಟ ಮಾಡಲು ಸಾಧ್ಯ ಎಂಬ ಬಗ್ಗೆಯೂ ಮಾಹಿತಿ ಮತ್ತು ಮಾರ್ಗದರ್ಶನ ಪಡೆದಿದ್ದಾರೆ. ಇದರ ಹೊಣೆಗಾರಿಕೆಯನ್ನು ಹಿರಿಯ ವಕೀಲರಿಗೆ ವಹಿಸಿದ್ದಾರೆ ಎನ್ನಲಾಗಿದೆ.

# ಸ್ಲೋವೇಕಿಯಾ ಪ್ರಧಾನಿ ಮೇಲೆ ಗುಂಡಿನ ದಾಳಿ

**(1ನೇ ಪುಟದಿಂದ)** ಹೊಟ್ಟೆಯ ಮೇಲೆ ನಾಲ್ಕು ಸುತ್ತು ಗುಂಡು ಹಾರಿಸಲಾಗಿದೆ. ಹಂಡ್ಲೊವಾ ಎಂಬ ನಗರದಲ್ಲಿ ಈ ದಾಳಿ ನಡೆಸಲಾಗಿದೆ. ದಾಳಿ ನಡೆಸಿದ ಶಂಕಿತನನ್ನು ಬಂಧಿಸಲಾಗಿದೆ ಎಂದು ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಚಿಕಿತ್ಸೆಗೆ ಸುದೀರ್ಘ ಸಮಯ ಬೇಕಾಗಲಿದೆ. ಮುಂದಿನ ಕೆಲ ಗಂಟೆಗಳು ಸೂಕ್ಷ್ಮವಾಗಿವೆ ಎಂದು ಫಿಕೋ ಅವರ ಫೇಸ್‌ಬುಕ್ ಹೇಳಿಕೆಯಲ್ಲಿ ತಿಳಿಸಲಾಗಿದೆ.

# ಸಿ.ಎ.ಎ. ಅನ್ವಯ 14 ಜನರ ಮೊದಲ ತಂಡಕ್ಕೆ ಪೌರತ್ವ

**(1ನೇ ಪುಟದಿಂದ)** ಇವರು ಆನ್‌ಲೈನ್ ಮೂಲಕ ಅರ್ಜಿ ದಾಖಲಿಸಿದ್ದರು. ಬಾಂಗ್ಲಾದೇಶ, ಪಾಕಿಸ್ತಾನ ಹಾಗೂ ಆಫ್ಘಾನಿಸ್ತಾನಗಳ ಅಲ್ಪಸಂಖ್ಯಾತರಿಗೆ ಭಾರತದ ಪೌರತ್ವ ನೀಡಲು ಸಿ.ಎ.ಎ. ರೂಪಿಸಲಾಗಿದೆ.

# ದೊಡ್ಡಮಲ್ಲಾಪುರ : ಸಮರ್ಥ ಶಾಮನೂರ್‌ರವರಿಂದ ವೃತ್ತ ಉದ್ಘಾಟನೆ



ಚನ್ನಗಿರಿ, ಮೇ 15 - ತಾಲ್ಲೂಕಿನ ದೊಡ್ಡಮಲ್ಲಾಪುರ ಗ್ರಾಮದಲ್ಲಿ ಶುಕ್ರವಾರ ಕಾಂಗ್ರೆಸ್‌ನ ಯುವ ಮುಖಂಡ ಸಮರ್ಥ್ ಶಾಮನೂರು ಶ್ರೀ ಬಸವೇಶ್ವರ ವೃತ್ತವನ್ನು ಉದ್ಘಾಟಿಸಿದರು.

ಈ ವೇಳೆ ಗ್ರಾಮದ ಮುಖಂಡರು, ಯುವಕರು ಇದ್ದರು.

# ಮಲೇಬೆನ್ನೂರಿನ ವಿವಿಧೆಡೆಯಲ್ಲಿ ಬಸವ ಜಯಂತಿ ಆಚರಣೆ





ಮಲೇಬೆನ್ನೂರು, ಮೇ 15 - ನಾಡಿನ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರ ಜಯಂತಿಯನ್ನು ಮಲೇಬೆನ್ನೂರು ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು.

ಪುರಸಭೆ ಮತ್ತು ನಾಡ ಕಛೇರಿಯಲ್ಲಿ ಹಮ್ಮಿಕೊಂಡಿದ್ದ ಬಸವ ಜಯಂತಿಯಲ್ಲಿ ಪುರಸಭೆ ಮುಖ್ಯಾಧಿಕಾರಿ ಎ.ಸುರೇಶ್ ಮತ್ತು ಉಪ ತಹಸೀಲ್ದಾರ್ ಆರ್.ರವಿ ಅವರು, ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಪೂಜೆ ಸಲ್ಲಿಸಿದರು.

ನಾಡ ಕಛೇರಿಯ ಕಂದಾಯ ನಿರೀಕ್ಷಕ ಆನಂದ್, ಗ್ರಾಮಲೆಕ್ಕಾಧಿಕಾರಿ ಷರೀಫ್ ಹಾಗೂ ಸಿಬ್ಬಂದಿಗಳು ಮತ್ತು ಪುರಸಭೆಯ ಪ್ರಭು, ಉಮೇಶ್, ಶಿವರಾಜ್, ಮಂಜುನಾಥ್, ಮಾಜಿ ಸದಸ್ಯರಾದ ಬಿ.ಸುರೇಶ್, ಯೂಸುಫ್ ಖಾನ್, ಭೋವಿ ಕುಮಾರ್, ಚಮನ್ ಷಾ ಹಾಗೂ ಪುರಸಭೆ ಸಿಬ್ಬಂದಿಗಳು ಭಾಗವಹಿಸಿದ್ದರು.

ಪಟ್ಟಣದ ಬಸವ ಮಂಟಪದಲ್ಲಿ ಬಸವ ಬಳಗ ಮತ್ತು ಅಕ್ಕನ ಬಳಗದ ವತಿಯಿಂದ ಏರ್ಪಡಿಸಿದ್ದ ಬಸವ ಜಯಂತಿಯಲ್ಲಿ ಕುಂಬಾರ ಗುರು ಪೀಠದ ಶ್ರೀ ಕುಂಬಾರ ಗುಂಡಯ್ಯ ಸ್ವಾಮೀಜಿ, ಎಪಿಎಂಸಿ ಮಾಜಿ ಅಧ್ಯಕ್ಷ ಜಿ.ಮಂಜುನಾಥ್ ಪಟೇಲ್, ಗ್ರಾ.ಪಂ ಮಾಜಿ ಅಧ್ಯಕ್ಷ ಭೋವಿ ಕುಮಾರ್, ಬೆಣ್ಣೆಹಳ್ಳಿ ಬಸವರಾಜ್, ಹಿಂಡಸಘಟ್ಟಿ ತಿಪ್ಪೇಸ್ವಾಮಿ, ಬಸವ ಬಳಗದ ಅಧ್ಯಕ್ಷ ವೈ.ನಾರೇಶಪ್ಪ ಹಾಗೂ ಸದಸ್ಯರು ಮತ್ತು ಅಕ್ಕನ ಬಳಗದ ಸರೋಜಮ್ಮ ಹಾಗೂ ಸದಸ್ಯರು ಪಾಲ್ಗೊಂಡಿದ್ದರು.

# ಜಾರ್ಖಂಡ್ ಸಚಿವ ಅಲಂ ಬಂಧನ

**(1ನೇ ಪುಟದಿಂದ)** ಕಾರ್ಯದರ್ಶಿ ಸಂಜೀವ್ ಲಾಲ್ ಹಾಗೂ ಅವರ ಮನೆ ಕೆಲಸದ ಜಹಂಗೀರ್ ಆಲಂ ಬಂಧಿಸಲಾಗಿತ್ತು. ಇವರಿಗೆ ಸಂಬಂಧಿಸಿದ ಫ್ಲಾಟ್ ಒಂದರಿಂದ 32 ಕೋಟಿ ರೂ. ನಗದು ವಶಡಿಸಿಕೊಳ್ಳಲಾಗಿತ್ತು. ಲಾಲ್ ಈ ಹಿಂದೆ ರಾಜ್ಯ ಸರ್ಕಾರದ ಹಲವು ಸಚಿವಾಲಯಗಳಲ್ಲಿ ಕಾರ್ಯನಿರ್ವಹಿಸಿದ್ದ. ಈ ಹಣಕ್ಕೂ ನನಗೂ ಸಂಬಂಧ ಇಲ್ಲ ಎಂದು ಸಚಿವ ಆಲಂ ಹೇಳಿದ್ದಾರೆ.


**TEACHERS WANTED**
BA, B.Ed or MA English Major
B.Sc. B.Ed or M.Sc. Science Teacher
Anjum Composite High School
Kannada, Urdu & English Medium
Apply or Attend Immediately to above Address
93793 45070, 95381 21919

**IMMEDIATELY REQUIRED**
FEMALE
Computer Teacher for
DRR SCHOOL
P. B.Road Davangere.
9886217745 / 9844007624

**ಬೇಕಾಗಿದ್ದಾರೆ**
ಪತ್ರಿಕಾ ಕಾರ್ಯಾಲಯದಲ್ಲಿ ಸಂಜೆ ಪಾಳಿಯದಲ್ಲಿ ಕನ್ನಡ ಭಾಷಾ ಜ್ಞಾನ ಹಾಗೂ ಕನ್ನಡ ಟೈಪಿಂಗ್ ಬಲ್ಲ ಕಂಪ್ಯೂಟರ್ ಆಪರೇಟರ್ ಹುದ್ದೆಗೆ ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ : ಮಧ್ಯಾಹ್ನ 12ರ ನಂತರ
ಫೋ. : 08192 254736

**ಬೇಕಾಗಿದ್ದಾರೆ**
ಎಲೆಕ್ಟ್ರಿಕ್ ಬೈಕ್ ಶೋ ರೂಂನಲ್ಲಿ B.Com / MBA ಆದ ಪುರುಷರು, ಮಹಿಳೆಯರು ಸೇಲ್ಸ್‌ಮೆನ್ ಕೆಲಸ ಮಾಡಲು ಬೇಕಾಗಿದ್ದಾರೆ.
ಸಂಪರ್ಕಿಸಿ.
9108126726, 77953 93434

**ತಕ್ಷಣ ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಕ್ಲೀನಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ.
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ-1.
87622 21696

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಎಗ್ ಸೆಂಟರ್
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ.
888 424 0403

**WANTED**
Required Male Office Assistant
ANDANUR CHITS (R)
Ram & Co. Circle, Davanagere.

**ಬೇಕಾಗಿದ್ದಾರೆ**
1) ಆರ್ಡರ್ ಬುಕ್ಕಿಂಗ್ - ಪಿಯುಸಿ
2) ಬಿ.ಕಾಂ ಅಕೌಂಟ್ಸ್ / ಬಿಲ್ಲಿಂಗ್ ಜೊತೆಗೆ ಕಂಪ್ಯೂಟರ್ ಜ್ಞಾನ
(ವಿವಾಹಿತ ಮಹಿಳೆಯರಿಗೆ ಆದ್ಯತೆ)
ಸ್ವವಿವರದೊಂದಿಗೆ ಸಂಪರ್ಕಿಸಿ.
ಎ.ಕೆ. ಟ್ರೇಡರ್
ಬಾಪೂಜಿ ಆಸ್ಪತ್ರೆ ರಸ್ತೆ, ಪಿ.ಜೆ.ಬಡಾವಣೆ, ದಾವಣಗೆರೆ.

**ಬೇಕಾಗಿದ್ದಾರೆ**
ಬಿಲ್ಡಿಂಗ್‌ನಲ್ಲಿ ಎಲೆಕ್ಟ್ರಿಕಲ್ / ವೈರಿಂಗ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಅನುಭವವಿದ್ದವರಿಗೆ ಆದ್ಯತೆ.
ಆಸಕ್ತರು ಸಂಪರ್ಕಿಸಿ :
99167 01303

**WANTED**
Helpers (Boys)
BHERAV DISTRIBUTOR
Jaydev Circle Davangere
90365-74144

**ಸೈಟುಗಳು ಮಾರಾಟಕ್ಕಿವೆ**
ಸರ್ಕಾರಿ ನೌಕರರ ಬಡಾವಣೆ, 2ನೇ ಹಂತ, ಜಿಎಂಐಟಿ ಹತ್ತಿರ
30x40 ಪೂರ್ವ.
90361 89699
72592 69940

**ಬೇಕಾಗಿದ್ದಾರೆ**
ಎಸ್.ವಿ. ಮಾರ್ಕೆಟಿಂಗ್
* ಆಟೋ ಡ್ರೈವರ್
* ಸೇಲ್ಸ್ ಎಕ್ಸಿಕ್ಯೂಟಿವ್
* ಅಂಗಡಿಯಲ್ಲಿ ಕೆಲಸ ಮಾಡುವವರು.
63620 23451, 97434 37003

**ಆಫೀಸ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಕಿಸಾನ್ ವರ್ಲ್ಡ್, ಹದಡಿ ರಸ್ತೆ, ವಾಣಿ ರೈಸ್ ಮಿಲ್ ಎದುರು, ದಾವಣಗೆರೆ
86603 25898

**ಮನೆಗಳು ಲೀಸ್‌ಗೆ ಇವೆ**
ವಿದ್ಯಾನಗರ ಕೊನೆಯ ಬಸ್‌ಸ್ಟಾಪ್ ಹತ್ತಿರ, 2 ಬೆಡ್ ರೂಮ್, 3 ಬೆಡ್‌ರೂಮ್, ಮೊದಲನೇ ಮಹಡಿಯಲ್ಲಿ, ಹೈಟೆಕ್ ಹಾಸ್ಪಿಟಲ್ ಹತ್ತಿರ, ಹೈಟೆಕ್ ಲೇಔಟ್‌ನಲ್ಲಿ ಇಂಡಿಪೆಂಡೆಂಟ್ ಹೌಸ್, 3 ಬೆಡ್ ರೂಮ್ ಮನೆ ಲೀಸ್‌ಗೆ ಇದೆ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮನೆ ಬಾಡಿಗೆಗೆ ಇದೆ**
ನಿಟ್ಟುವಳ್ಳಿ ಮೌನೇಶ್ವರ ಬಡಾವಣೆ, 3ನೇ ಮೇನ್, 1ನೇ ಕ್ರಾಸ್‌ನಲ್ಲಿ, #545/63ರಲ್ಲಿ ಮೂಲ ಸೌಕರ್ಯಗಳನ್ನು ಹೊಂದಿದ್ದು, 2 ಮನೆಗಳು. ಮೊದಲ ಹಾಗೂ ಎರಡನೇ ಮಹಡಿಯಲ್ಲಿ ಬಾಡಿಗೆಗೆ ಇವೆ.
72593 24598

**ಮನೆ ಬಾಡಿಗೆಗೆ ಇದೆ**
ಡಬ್ಬಲ್ ಬೆಡ್ ರೂಮ್, ಅಟ್ಯಾಚ್ ಬಾತ್ ರೂಮ್, ಮೊದಲನೆ ಮಹಡಿ, ಶೇಖರಪ್ಪ ಬಡಾವಣೆ, ಅಶ್ವಿನ್ ಕ್ಲಿನಿಕ್ ಹಿಂಭಾಗ, ಆವರಗೆರೆ, ದಾವಣಗೆರೆ.
98443 89966

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ, ಶಿವಪಾರ್ವತಿ ಗ್ಲಾಸ್ ಹೌಸ್ ಲೇಔಟ್, ಗೀತಂ ಕಾಲೇಜ್ ಹತ್ತಿರ, ಜೆ.ಹೆಚ್. ಪಟೇಲ್ ಬಡಾವಣೆ, ಹೈಟೆಕ್ ಹಿಂಭಾಗ, ಎರಗುಂಟೆ ಇನ್ವೆಸ್ಟ್ ಸೈಟ್ಸ್, ಉತ್ತಮ ದರದಲ್ಲಿ ದೊರೆಯುತ್ತವೆ. 30x40, 40x50, 40x60, 30x50 ಎಲ್ಲಾ ಅಳತೆಯ ಸೈಟ್‌ಗಳಿವೆ.
97315 12365

**WANTED LADY TEACHERS**
* B.sc./BEd., - PCM/ CBZ - 04 posts
* BA/BEd.,- 04 posts
* COMPUTER TEACHERS -02
Note: we preference will be given to right & experienced & attractive salary will be given to experienced candidates.
95356 10817

**ವಾಣಿಜ್ಯೋಪಯೋಗಿ ಮಳಿಗೆ ಬಾಡಿಗೆಗಿದೆ**
ದಾವಣಗೆರೆ ಹೃದಯಭಾಗ ಬೆಳ್ಳೂಡಿ ಗಲ್ಲಿಯಲ್ಲಿ ಎರಡು ವಾಣಿಜ್ಯೋಪಯೋಗಿ (ಎದುರು) ಮಳಿಗೆಗಳು ಗೋಡೌನ್ ಗೂ ಅನುಕೂಲವಿದ್ದು ಬಾಡಿಗೆಗಿವೆ. ಸಂಪರ್ಕಿಸಿ :
80733 01110, 70229 59805

**ಬೇಕಾಗಿದ್ದಾರೆ**
ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, 6ನೇ ಕ್ರಾಸ್, ಕೊಂಡಜ್ಜಿ ರಸ್ತೆಯಲ್ಲಿರುವ ಶ್ರೀ ಮಾತಾ ವಿದ್ಯಾಸಂಸ್ಥೆ (ರಿ.). ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆಗೆ ಪಾರ್ಟ್‌ಟೈಂ ಡ್ರೈವರ್ ಬೇಕಾಗಿದ್ದಾರೆ. ಹಾಗೂ ಶಾಲೆಗೆ ಆಯಾ, ಜವಾನರು ಬೇಕಾಗಿದ್ದಾರೆ. ಸಂಪರ್ಕಿಸಿ :
99640 17729

**WANTED**
NO SALES
NGO
Tele - Callers
Only FEMALE
Full time
63630 93755

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ.
81478 03755

**WANTED**
Boys & Girls required for billing work at Food Mart Supermarket.
Quli : Any Degree
Mob ; 98864 63531

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

ನೇರ ಪರೀಕ್ಷೆ ಕಟ್ಟಲು/ರೆಗ್ಯುಲರ್ ಪ್ರವೇಶಕ್ಕಾಗಿ
**SSLC ನೇರ ಪರೀಕ್ಷೆ**
IInd PUC/Senior Secondary, Arts/Commerce/Science
B.Sc.-Agriculture, B.Tech All branches,
D.Pharma, B.Ed., PhD regular
B.A., B.com., B.Sc., M.A., M.Com., MBA, MLIB, Correspondence.
SS Global Institute for Higher Education
1982-1ನೇ ಮಹಡಿ, ಅನ್ವಯ ಆಯುರ್ವೇದಿಕ್ ಆಸ್ಪತ್ರೆ, ಶ್ರೀ ಸಾಯಿಬಾಬಾ ದೇವಸ್ಥಾನ ಹತ್ತಿರ, ಎಂಸಿಸಿ 'ಎ' ಬ್ಲಾಕ್, ದಾವಣಗೆರೆ-04.
72593 59861/99863 45266
ವಿ. ಸೂ: ಫೀಸನ್ನು ಕಂತಿನಲ್ಲಿ ಪಾವತಿಸಬಹುದು

**ಕೆಲಸಕ್ಕೆ ಬೇಕಾಗಿದ್ದಾರೆ**
ಷೋ ರೂಂನಲ್ಲಿ ಕೆಲಸ ಮಾಡಲು DTP ಮತ್ತು ಕೋರಲ್ ಡ್ರಾ ಅನುಭವವುಳ್ಳವರು ಬೇಕಾಗಿದ್ದಾರೆ. ಸಂಬಳದ ಜೊತೆಗೆ ESI-PF ಒಳಗೊಂಡಿರುತ್ತದೆ.
ಶ್ರೀನಿವಾಸ ಹೋಂಡಾ, ಹದಡಿ ಮೇನ್, ರೋಡ್, ದಾವಣಗೆರೆ.
70269 49724

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರ 5ನೇ ಬಸ್‌ಸ್ಟಾಪ್ ಹತ್ತಿರ 40x60 ಉತ್ತರ, 40x60 ದಕ್ಷಿಣ, 30x40 ದಕ್ಷಿಣ, ವಿನಾಯಕ ಬಡಾವಣೆಯಲ್ಲಿ 40x60 ಪೂರ್ವ (ಅಕ್ಕ-ಪಕ್ಕ) 40x60 ಉತ್ತರ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
Shah Opticals
4th Main, Opp. Drushti Eye Hospital, P.J Extension, Davanagere - 577002
93536 89957

**ಬೇಕಾಗಿದ್ದಾರೆ**
ದಾವಣಗೆರೆ ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕೆಲಸ ಮಾಡಲು ಹುಡುಗರು ಹಾಗೂ ಹುಡುಗಿಯರು ಬೇಕಾಗಿದ್ದಾರೆ. Job Role : ಆರೋಗ್ಯ ಸಲಹೆಗಾರರು (Health Advisor)
Qualification : PUC, Paramedical Background Salary : 10,000+
Attractive insensitive Contact no :
74836 52027, 91087 65652

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ - ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಕರ್ನಾಟಕ ಮುಕ್ತ ವಿದ್ಯಾಲಯ (KOS)**
ಕೇಂದ್ರ ಹಾಗೂ ರಾಜ್ಯ ಸರ್ಕಾರದ ಶಾಶ್ವತ ಮಾನ್ಯತೆ ಪಡೆದಿದೆ
ಶಿಕ್ಷಣ ವಂಚಿತರಾದವರಿಗೆ ನೇರ ಪರೀಕ್ಷೆ
SSLC/PUC/ಪದವಿ/ಸ್ನಾತಕೋತ್ತರ ಪದವಿ & ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶ ಪ್ರಾರಂಭ
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 87620 58369, 82173 02649

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಉಚಿತ ದಂತ ತಪಾಸಣಾ ಶಿಬಿರ**
ನವಜಾತ ಶಿಶುವಿನಿಂದ 15 ವರ್ಷದ ಮಕ್ಕಳಿಗೆ
ಏಪ್ರಿಲ್ 01 ರಿಂದ ಮೇ 31ರವರೆಗೆ
ಅರಿವು ಡೆಂಟಲ್ ಕ್ಲಿನಿಕ್
ಪಿ.ಜೆ. ಬಡಾವಣೆ, ದಾವಣಗೆರೆ.
76762 98958, 70196 88355

**WANTED**
A.Order Booking - PUC
B.B.Com Accounts/ Billing with Computer Knowledge
(Married Ladies Prefered)
Contact along with Bio Data
AK TRADERS
BAPUJI HOSPITAL ROAD PJ EXTENSION

**TEACHERS WANTED**
Science - 2 Posts
English - 2 Posts
Computer - 2 Posts
PE - 2 Posts
Contact : SRIS, DCM Town Ship, Dvg
80950 08434

**TEACHERS WANTED**
Maths - 2 Posts
Science - 2 Posts
English - 2 Posts
Computer - 2 Posts
PE - 2 Posts
Contact : SRIS, Gutturu, Harihara
80950 09629

# ಕಾಯಕದ ಮಹತ್ವ ಜಗತ್ತಿಗೇ ಸಾರಿದ ಮಹಾನ್ ವ್ಯಕ್ತಿ ಬಸವೇಶ್ವರ



## ಬಸವ ಜಯಂತಿ ಕಾರ್ಯಕ್ರಮದಲ್ಲಿ ದಾವಿವಿ ಕುಲಪತಿ ಪ್ರೊ.ಬಿ.ಡಿ ಕುಂಬಾರ

ದಾವಣಗೆರೆ,ಮೇ 15- ಮಾತಿನ ಮಹತ್ವವನ್ನು, ಕಾಯಕದ ಮಹತ್ವವನ್ನು ಇಡೀ ಜಗತ್ತಿಗೇ ಸಾರಿದಂತಹ ಮಹಾನ್ ವ್ಯಕ್ತಿ ಶ್ರೀ ಜಗಜ್ಯೋತಿ ಬಸವೇಶ್ವರರ ತತ್ವ ಮತ್ತು ಮೌಲ್ಯಗಳನ್ನು ನಾವು ಅನುಸರಿಸಿದರೆ, ಸಮ ಸಮಾಜ ನಿರ್ಮಾಣ ಸಾಧ್ಯ ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಬಿ.ಡಿ ಕುಂಬಾರ ಹೇಳಿದರು.

ವಿಶ್ವವಿದ್ಯಾನಿಲಯದ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ಘಟಕದ ವತಿಯಿಂದ ಆಯೋಜಿಸಲಾಗಿದ್ದ ಬಸವೇಶ್ವರರ 893ನೇ ಜಯಂತ್ಯೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಬಸವಣ್ಣನವರು ಶರಣ ಸಮೂಹದ ವಚನಗಳ ಮೂಲಕ ಸಾಮಾಜಿಕ ಓರೆ ಕೋರೆಗಳನ್ನು ತಿದ್ದುವ ಕಾರ್ಯವನ್ನು ಮಾಡಿದರು. ಹೀಗಾಗಿ ಅವರ ವಚನಗಳನ್ನು ಪಚನ ಮಾಡಿಕೊಳ್ಳಬೇಕು. ಆಗ 'ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ, ಮನವ ಸಂತೈಸಿಕೊಳ್ಳಿ' ಎಂಬ ಮಾತು ಸಾರ್ಥಕಗೊಳ್ಳುತ್ತದೆ ಎಂದರು.

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಡಾ. ನಿಂಗಪ್ಪ ಮುದೇನೂರು ಅವರು ಬಸವೇಶ್ವರರನ್ನು ಕುರಿತು ವಿಶೇಷ ಉಪನ್ಯಾಸ ನೀಡಿದರು. ಬಸವಣ್ಣನವರು ನಡೆಸಿದ ಕಾರ್ಯ ಹೋರಾಟವಾಗಿತ್ತು, ಚಳುವಳಿಯಾಗಿತ್ತು. ಸಾಮಾ ಜಿಕ ಸಮಾನತೆಯ ಸಂದರ್ಭದಲ್ಲಿ ಜನಜೀವನ ವನ್ನು ಉನ್ನತಗೊಳಿಸುವ ಕೈಂಕರ್ಯಕ್ಕೆ ತೊಡಗಿ ಕೊಂಡರು. ತಾವಷ್ಟೇ ಅಲ್ಲ ತಮ್ಮ ಜೊತೆಗೆ ಅನೇಕ ತಳ ಸಮುದಾಯಗಳ ಅನಕ್ಷರಸ್ಥರನ್ನು ಸೇರಿಸಿ ಕೊಂಡು ಹೋರಾಟ ನಡೆಸಿದ್ದು ಸ್ತುತ್ಯಾರ್ಹ, ಅದಕ್ಕೆ ಅವರನ್ನು 'ಕರ್ನಾಟಕದ ಮಾರ್ಟಿನ್ ಲೂಥರ್' ಎಂದು ಕರೆಯುತ್ತಾರೆ ಎಂದು ಹೇಳಿದರು.

ಕುಲಸಚಿವ ಪ್ರೊ. ಯು.ಎಸ್ ಮಹಾ ಬಲೇಶ್ವರ್ ಮಾತನಾಡಿ, ಬಸವಣ್ಣನವರು ಮಹಿಳೆಯರಿಗೆ ಸಮಾನತೆ, ಸ್ವಾಭಿಮಾನದ ಬದುಕನ್ನು ರೂಪಿಸಿದವರು. ಅವರ ತತ್ವ, ಆದರ್ಶಗಳು ಸಮ ಸಮಾಜ ನಿರ್ಮಾಣಕ್ಕೆ ಸಹಕಾರಿಯಾಗಿವೆ ಎಂದರು.

ಹಣಕಾಸು ಅಧಿಕಾರಿ ದ್ಯಾಮನಗೌಡ ಮುದ್ದನಗೌಡರ ಮಾತನಾಡಿ, ಮಾನವೀಯತೆಯ ಪರಿಕಲ್ಪನೆಗೆ ಬುದ್ಧ ಬೀಜ ಹಾಕಿದರು, ಬಸವಣ್ಣ ನೀರೆರೆದು ಪೋಷಿಸಿದರು, ಅಂಬೇಡ್ಕರ್ ಅನುಷ್ಠಾನಕ್ಕೆ ತಂದರು. ಅವರೆಲ್ಲರ ಪ್ರಯತ್ನಗಳಿಂದ ಭಾರತದಲ್ಲಿ ಮಾನವೀಯತೆಯ ಪರಿಕಲ್ಪನೆ ದೃಢವಾಗಿ ನಿಂತಿದೆ ಎಂದು ತಿಳಿಸಿದರು.

ಕುಲಸಚಿವ ಪ್ರೊ. ಸಿ.ಕೆ ರಮೇಶ್, ಘಟಕದ ಸಂಚಾಲಕ ಡಾ. ನಾಗಭೂಷಣ ಗೌಡ ಸ್ವಾಗತಿಸಿದರು. ಡಾ. ಭೀಮಾಶಂಕರ್ ಜೋಶಿ ಕಾರ್ಯಕ್ರಮ ನಿರೂಪಿಸಿದರು.

# ತ್ಯಾಜ್ಯ ವಿಲೇವಾರಿ ಘಟಕ : 5 ಪೈಪ್ ಲೈನ್ ಗಳೊಂದಿಗೆ ಬೆಂಕಿ ನಂದಿಸುವ ಕಾರ್ಯ



## ಮಹಾನಗರಪಾಲಿಕೆ ಆಯುಕ್ತರ ಭರವಸೆ

ದಾವಣಗೆರೆ, ಮೇ 15 - ಇಲ್ಲಿಗೆ ಸಮೀಪದ ಆವರಗೊಳ್ಳದಲ್ಲಿ ಮಹಾನಗರ ಪಾಲಿಕೆಯ ವತಿಯಿಂದ ನಿರ್ವಹಿಸುತ್ತಿರುವ ಘನ ತ್ಯಾಜ್ಯ ವಿಲೇವಾರಿ ಘಟಕ ಸ್ಥಳಾಂತರಕ್ಕೆ ಆಗ್ರಹಿಸಿ ಪ್ರತಿಭಟನೆ ನಡೆದ ಹಿನ್ನೆಲೆಯಲ್ಲಿ ಪಾಲಿಕೆ ಸದಸ್ಯರು ಹಾಗೂ ಆಯುಕ್ತರಾದ ಶ್ರೀಮತಿ ರೇಣುಕಾ ಅವರ ನೇತೃತ್ವದಲ್ಲಿ ಇಂದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಲಾಯಿತು.

ಮೇಯರ್ ವಿನಾಯಕ್ ಪೈಲ್ವಾನ್, ಸದಸ್ಯರಾದ ಗಡಿಗುಡಾಳ್ ಮಂಜುನಾಥ್, ಕೆ. ಚಮನ್ ಸಾಬ್, ಸೋಗಿ ಶಾಂತಕುಮಾರ್, ಮೀನಾಕ್ಷಿ ಜಗದೀಶ್, ವಿರೋಧ ಪಕ್ಷದ ನಾಯಕ ಪ್ರಸನ್ನಕುಮಾರ್, ಇಟ್ಟುಗುಡಿ ಮಂಜುನಾಥ್, ಜಗದೀಶ್ ಮತ್ತಿತರ ತಂಡವು ಅಧಿಕಾರಿಗಳೊಂದಿಗೆ ತೆರಳಿ ಸ್ಥಿತಿಗತಿ ಪರಿಶೀಲಿಸಿತು.

ಈ ವೇಳೆ ಮಾತನಾಡಿದ ಆಯುಕ್ತರಾದ ರೇಣುಕಾ ಅವರು, 33 ಎಕರೆ ಜಾಗದ ಪೈಕಿ ಸದ್ಯಕ್ಕೆ 13 ಎಕರೆ ಪ್ರದೇಶದಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕ ಕಾರ್ಯನಿರ್ವಹಿಸುತ್ತಿದೆ. ಮೇ 2ರಂದು ತ್ಯಾಜ್ಯಕ್ಕೆ ಬೆಂಕಿ ಬಿದ್ದಿದ್ದು, ಪಾಲಿಕೆ ಹಾಗೂ ಅಗ್ನಿಶಾಮಕ ದಳ ಸಿಬ್ಬಂದಿ ಜೊತೆಗೂಡಿ ಬೆಂಕಿ ನಂದಿಸುವ ಕಾರ್ಯ ಮಾಡಲಾಗುತ್ತಿದೆ. ಆರಂಭದಲ್ಲಿ ಮೂರು ಕಡೆಗಳಲ್ಲಿ ಪೈಪ್ ಲೈನ್ ಮೂಲಕ ನೀರು ಹಾಯಿಸಿ ಬೆಂಕಿ ನಂದಿಸುವ ಕಾರ್ಯ ಮಾಡಲಾಯಿತಾದರೂ ಸಾಕಾಗದ ಕಾರಣ ಮತ್ತೆ ಎರಡು ಕಡೆಗಳಲ್ಲಿ ಪೈಪ್ ಲೈನ್ ಮೂಲಕ ನೀರು ಹಾಯಿಸಿ ಬೆಂಕಿ ಶಮನ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಘನತ್ಯಾಜ್ಯ ವಿಲೇವಾರಿಗೆ ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ. ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ಅನುದಾನಕ್ಕೆ ಅನುಮತಿ ಪಡೆಯಲಾಗುವುದು. ಡಂಪಿಂಗ್ ಯಾರ್ಡ್ ಇರುವುದರಿಂದ ಸಮಸ್ಯೆಯಾಗುತ್ತಿದೆ ಎಂಬುದು ಗ್ರಾಮಸ್ಥರ ಅಳಲು. ಮುಂಬರುವ ದಿನಗಳಲ್ಲಿ ಸಮಸ್ಯೆಯಾಗದಂತೆ ಕಾರ್ಯನಿರ್ವಹಿಸುವಂತೆ ಸಂಬಂಧಪಟ್ಟವರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಉತ್ತರ ಭಾಗದಲ್ಲಿ ತ್ಯಾಜ್ಯ ವಿಲೇವಾರಿ ಘಟಕ ಸ್ಥಾಪನೆ ಕುರಿತಂತೆ ಜಾಗ ಪರಿಶೀಲನೆ ನಡೆಸಲಾಗುತ್ತಿದೆ. ಒಂದೇ ಕಡೆ ತ್ಯಾಜ್ಯ ಹಾಕುತ್ತಿರುವುದರಿಂದ ಸಹಜವಾಗಿಯೇ ಗ್ರಾಮಸ್ಥರಲ್ಲಿ ಆತಂಕ ಶುರು ಆಗಿದೆ. ಇನ್ನೊಂದು ಕಡೆ ಘಟಕ ಆರಂಭಿಸಿದರೆ ಸಮಸ್ಯೆಗೆ ಪರಿಹಾರ ಸಿಗಲಿದೆ. ಈ ನಿಟ್ಟಿನಲ್ಲಿಯೂ ಕಾರ್ಯೋನ್ಮುಖರಾಗಿದ್ದೇವೆ ಎಂದು ತಿಳಿಸಿದರು.

ಈ ವೇಳೆ ಮಾತನಾಡಿದ ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್ ಅವರು, ಯಾರೋ ಕಿಡಿಗೇಡಿಗಳು ಬೆಂಕಿ ಹಚ್ಚಿರುವುದರಿಂದ ಸಮಸ್ಯೆ ಆಗಿದೆ. ರಾತ್ರಿ ವೇಳೆ ಗಾಳಿ ಹೆಚ್ಚಿರುವ ಕಾರಣ ಬೆಂಕಿ ತಕ್ಷಣವೇ ನಂದಿಸಲು ಆಗದು. ಈ ಕಾರಣಕ್ಕಾಗಿ ಈಗಾಗಲೇ ಐದು ಕಡೆಗಳಲ್ಲಿ ಪೈಪ್ ಲೈನ್ ಮೂಲಕ ಬೆಂಕಿ ನಂದಿಸುವ ಕಾರ್ಯ ನಡೆಯುತ್ತಿದೆ. ಗಾಳಿ ಹೆಚ್ಚಿರುವ ಕಾರಣ ಧೂಳು ಬರುತ್ತಿದ್ದು, ಜನರಿಗೆ ಸಮಸ್ಯೆಯಾಗುತ್ತಿರುವುದು ಗಮನಕ್ಕೆ ಬಂದಿದೆ. ಆದಷ್ಟು ಬೇಗ ಪರಿಹರಿಸಲಾಗುವುದು ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರ ಗಮನಕ್ಕೂ ಈ ವಿಚಾರ ತರಲಾಗಿದೆ. ಆದಷ್ಟು ಬೇಗ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯೋನ್ಮುಖರಾಗುವಂತೆ ಸಚಿವರು ಸೂಚನೆ ನೀಡಿದ್ದಾರೆ ಎಂದು ಹೇಳಿದರು.

# ಹರಪನಹಳ್ಳಿ ಪಿ.ಎಲ್.ಡಿ.ಬ್ಯಾಂಕಿಗೆ ನಾಮ ನಿರ್ದೇಶನ ಸದಸ್ಯರ ಆಯ್ಕೆ



ಹರಪನಹಳ್ಳಿ, ಮೇ 15 - ಪಟ್ಟಣದ ಪಿ.ಎಲ್.ಡಿ.ಬ್ಯಾಂಕಿನ ಕೆ. ಶಿದ್ಲಿಂಗಪ್ಪ ಮೃತರಾದ ಹಿನ್ನೆಲೆಯಲ್ಲಿ ಆ ಸ್ಥಾನಕ್ಕೆ ತೆಲಿಗಿಯ ಆರ್ ವೀರಪ್ಪನವರನ್ನು ಕೋ ಆಪ್ ಮಾಡಿಕೊಂಡು ಕೆ. ಶಿದ್ಲಿಂಗಪ್ಪ ಅವರನ್ನು ತೆಲಗಿ ಕ್ಷೇತ್ರದ ನಿರ್ದೇಶಕ ರನ್ನಾಗಿ ಮಾಡಿಕೊಳ್ಳಲಾಯಿತು.

ಸರ್ಕಾರಿ ನಾಮ ನಿರ್ದೇಶಕರಾಗಿ ಹೊನ್ನೇನ ಹಳ್ಳಿಯ ಹೆಚ್. ಭೀಮಪ್ಪ ರವರನ್ನು ಪಿ.ಎಲ್.ಡಿ ಬ್ಯಾಂಕಿಗೆ ಅಧಿಕಾರೇತರ ಸದಸ್ಯರನ್ನಾಗಿ ನಾಮ ನಿರ್ದೇಶನ ಸದಸ್ಯರನ್ನಾಗಿ ಆಯ್ಕೆ ಮಾಡಿಕೊಳ್ಳಲಾಯಿತು.

ಈ ವೇಳೆ ಪಿ.ಎಲ್.ಡಿ ಬ್ಯಾಂಕ್ ಅಧ್ಯಕ್ಷ ಪಿ.ಬಿ. ಗೌಡ ನಿರ್ದೇಶಕ ಪಿಎಲ್. ಪೋಮ್ಯನಾಯ್ಕ, ಶಾಂತಕುಮಾರ ರೆಡ್ಡಿ, ಮುತ್ತಿಗಿ ಜಂಬಣ್ಣ, ಎಚ್. ವಿಶಾಲಕ್ಷಮ್ಮ, ಬೆಲೂರು ಸಿದ್ದೇಶ, ಲಾಟಿ ದಾದಪೀರ್, ಆಲಮರಸಿಕೇರಿ ಜಗದೀಶ ಸೇರಿದಂತೆ ಇತರರು ಇದ್ದರು.

# ಹರಿಹರ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಡಿಪ್ಲೋಮ ಪ್ರವೇಶಕ್ಕೆ ಅರ್ಜಿ ಆಹ್ವಾನ

ಹರಿಹರ, ಮೇ 15 - ಪ್ರಥಮ ವರ್ಷದ ಸಿವಿಲ್ ಇಂಜಿನಿಯರಿಂಗ್ ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಇಂಜಿನಿಯರಿಂಗ್, ಮೆಕಾನಿಕಲ್ ಇಂಜಿನಿಯರಿಂಗ್ ಡಿಪ್ಲೋಮಾ ಪ್ರವೇಶಕ್ಕೆ ಮೇ 9 ರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು HYPERLINK "http://www.dtek.kar.gov.in/dtetech.kar.gov.in/kartechnical" \t "_blank" www.dtek.kar.gov.in/dtetech.kar.gov.in/kartechnical ವೆಬ್‌ಸೈಟ್ ಮೂಲಕ ಅರ್ಜಿ ಪಡೆದು ತಮ್ಮ ಮೂಲ ದಾಖಲಾತಿಗಳೊಂದಿಗೆ ಇದೇ ದಿನಾಂಕ ಮೇ 21 ರ ಸಂಜೆ 5.30 ಗಂಟೆಯೊಳಗಾಗಿ ಕಚೇರಿಗೆ ಸಲ್ಲಿಸಬೇಕು ಎಂದು ಸರ್ಕಾರಿ ಪಾಲಿಟೆಕ್ನಿಕ್ ಪ್ರಾಚಾರ್ಯರು ತಿಳಿಸಿದ್ದಾರೆ.

# ಅಂತರ್ ಜಿಲ್ಲಾ ಮಟ್ಟದ ಚದುರಂಗ ಸ್ಪರ್ಧೆ

ದಾವಣಗೆರೆ, ಮೇ 15 - ಜಿಲ್ಲಾ ಚೆಸ್ ಅಸೋಸಿಯೇಷನ್ ವತಿಯಿಂದ ಇದೇ ದಿನಾಂಕ 19ರ ಭಾನುವಾರ ನಗರದ ಗುರುಭವನದಲ್ಲಿ ಅಂತರ್ ಜಿಲ್ಲಾ ಮಟ್ಟದ ಚದುರಂಗ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ ಎಂದು ಜಿಲ್ಲಾ ಚೆಸ್ ಅಸೋಸಿಯೇಷನ್ ಅಧ್ಯಕ್ಷ ದಿನೇಶ್ ಕೆ ಶೆಟ್ಟಿ ತಿಳಿಸಿದ್ದಾರೆ. ವಿವರಕ್ಕೆ ಯುವರಾಜ್ (9945613469) ಮಂಜುಳಾ (7259310197) ಅವರನ್ನು ಸಂಪರ್ಕಿಸಬಹುದು.

# ಅಲ್ಪಸಂಖ್ಯಾತರ ವಸತಿ ಶಾಲೆಗಳಲ್ಲಿ 6ನೇ ತರಗತಿಗೆ ಪ್ರವೇಶ ಪರೀಕ್ಷೆ

ದಾವಣಗೆರೆ, ಮೇ 15 - ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳು ಹಾಗೂ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆಗಳಿಗೆ 2024-25ನೇ ಸಾಲಿನ 6ನೇ ತರಗತಿ ಪ್ರವೇಶಕ್ಕಾಗಿ ಪ್ರವೇಶ ಪರೀಕ್ಷೆಯನ್ನು ಇದೇ ದಿನಾಂಕ 19 ರಂದು ನಡೆಸಲಾಗುವುದು.

ವಿದ್ಯಾರ್ಥಿಗಳ ಪ್ರವೇಶ ಪತ್ರವನ್ನು ಜಿಲ್ಲಾ ಅಧಿಕಾರಿಗಳ ಕಚೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕೊಠಡಿ ಸಂಖ್ಯೆ 44, ಜಿಲ್ಲಾಡಳಿತ ಭವನ, ಪಿ.ಬಿ ರಸ್ತೆ, ಕರೂರು ಕ್ರಾಸ್, ದಾವಣಗೆರೆ ಇಲ್ಲಿ ವಿತರಿಸಲಾಗುತ್ತಿದೆ. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಸತಿ ಶಾಲೆಯ 6ನೇ ತರಗತಿ ಪ್ರವೇಶಕ್ಕಾಗಿ ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಿರುವ ಎಲ್ಲಾ ವಿದ್ಯಾರ್ಥಿಗಳು ಪ್ರವೇಶ ಪತ್ರವನ್ನು ಪಡೆದುಕೊಳ್ಳುವಂತೆ ತಿಳಿಸಿದೆ. ವಿವರಕ್ಕೆ ದೂ.ಸಂ: 08192-250022 ನ್ನು ಸಂಪರ್ಕಿಸಬಹುದೆಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿ ಮಲ್ಲಿಕಾರ್ಜುನ್ ಮಠದ್ ತಿಳಿಸಿದ್ದಾರೆ.

# ನಗರದ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ಇಂದು ದೀಪಾರ್ಚನೆ



ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ಶ್ರೀ ದೇವಿಗೆ ನಿನ್ನೆ ಮಾಡಲಾಗಿದ್ದ ಬೆಟ್ಟಡಿಕೆ ಅಲಂಕಾರದ ಪೂಜೆಯು ಭಕ್ತರ ಗಮನ ಸೆಳೆಯಿತು.

ದೇವಸ್ಥಾನದಲ್ಲಿ ಇಂದು ಸಂಜೆ 6.30ರಿಂದ ವಾಸವಿ ಆರತಿ ಹಾಡುಗಳೊಂದಿಗೆ ಶ್ರೀ ದೇವಿಗೆ ದೀಪಾರ್ಚನೆ ಮಾಡಲಾಗುತ್ತದೆ. ಇದೇ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಾಡಾಗಿದೆ ಎಂದು ಸಂಘದ ಅಧ್ಯಕ್ಷ ಆರ್. ಎಲ್. ಪ್ರಭಾಕರ್, ಕಾರ್ಯದರ್ಶಿ ಜೆ. ರವೀಂದ್ರ ಗುಪ್ತ ತಿಳಿಸಿದ್ದಾರೆ.

# 18 ರಂದು ಶ್ರೀ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿ ಬ್ರಹ್ಮ ರಥೋತ್ಸವ



ದಾವಣಗೆರೆ, ಮೇ 14 - ನಗರದ ಎಂಸಿಸಿ 'ಬಿ' ಬ್ಲಾಕ್‌ನಲ್ಲಿರುವ ಶ್ರೀ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಸ್ವಾಮಿಯ 25ನೇ ವರ್ಷದ ಬ್ರಹ್ಮ ರಥೋತ್ಸವವು ಇದೇ ದಿನಾಂಕ 18ರ ಶನಿವಾರ ಬೆಳಿಗ್ಗೆ 11.45ಕ್ಕೆ ನೆರವೇರಲಿದೆ. ಅಂದು ಮಧ್ಯಾಹ್ನ 12.30ಕ್ಕೆ ಸಕಲ ಭಕ್ತಾದಿಗಳಿಗೂ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.



# ಹರಿಹರ : ನಾಗಬನ ಮತ್ತು ಮೂಲದುರ್ಗ ದೇವಿ ದೇವಸ್ಥಾನಗಳಿಂದ ವಿಶೇಷ ಕಾರ್ಯಕ್ರಮ

ಹರಿಹರ, ಮೇ 15- ಇಲ್ಲಿಗೆ ಸಮೀಪದ ಕುಮಾರಪಟ್ಟಣದ ಕೊಡಿಯಾಲ ಹೊಸಪೇಟೆ ಗ್ರಾಮದ ಹತ್ತಿರ ತುಂಗಭದ್ರಾ ನದಿಯ ದಡದಲ್ಲಿರುವ, ಐತಿಹಾಸಿಕ ನಾಗಬನ ಮತ್ತು ಮೂಲದುರ್ಗಾ ದೇವಿ ದೇವಸ್ಥಾನ ಸಮಿತಿಯಿಂದ, ಇದೇ ದಿನಾಂಕ 20 ಮತ್ತು 21 ರಂದು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದಾಗಿ ಧರ್ಮದರ್ಶಿ ಮಂಜುನಾಥ ತಿಳಿಸಿದ್ದಾರೆ.

ಬುಧವಾರ ದೇವಸ್ಥಾನದಲ್ಲಿ ಪ್ರಚಾರ ಪರಿಕರಗಳನ್ನು ಬಿಡುಗಡೆಗೊಳಿಸಿದ ಅವರು ಮಾತನಾಡಿ, ದಿನಾಂಕ 20 ರಂದು ಸಂಜೆ 4 ಗಂಟೆಯಿಂದ ಕೊಡಿಯಾಲ ಹೊಸಪೇಟೆ ಗ್ರಾಮದ ದುಂಡಿ ಬಸವೇಶ್ವರ ದೇವಸ್ಥಾನದಿಂದ ದುರ್ಗಾದೇವಿ ನೂತನ ಬಿಂಬ ಉತ್ಸವ, ಕುಂಭಮೇಳ, ಅಂಬಾರಿ ಉತ್ಸವವಿರುತ್ತದೆ.

ದಿನಾಂಕ 21 ರಂದು ಬೆಳಿಗ್ಗೆ ಆದ್ಯ ಗಣಯಾಗ, ಪಂಚ ಕಲಶ ಪ್ರದಾನಯಾಗ, ಕಲಶಾಭಿಷೇಕ, ಚಂಡಿಕಾಯಾಗ, ಪ್ರಸಾದ ವಿತರಣೆ ನಡೆಯಲಿದೆ ಎಂದು ತಿಳಿಸಿದರು. ಪಾರ್ವತಮ್ಮ ಕರ್ಲಡೆಪ್ಪನವರ, ಇಂದೂಧರ ಸ್ವಾಮಿ, ಕಂಚಿಕೇರಿ ಕರಬಸಪ್ಪ, ವೀರೇಶ್ ಇದ್ದರು.

# ನಗರದಲ್ಲಿ ಇಂದು ಕುರಿ, ಮೇಕೆ ಸಾಕಾಣಿಕೆ ತರಬೇತಿ

ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ ಇಂದು ನಡೆಯಲಿದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-233787.

# ನಗರದಲ್ಲಿ ಇಂದು ವಿವೇಕ್ ಕಾರ್ಯಾಗಾರ

ಬಾಪೂಜಿ ಮಕ್ಕಳ ಆಸ್ಪತ್ರೆಯ ಸಂಶೋಧನಾ ಕೇಂದ್ರದಲ್ಲಿ ಇಂದು ಮಧ್ಯಾಹ್ನ 3.30ಕ್ಕೆ ವಿವೇಕ್ ಪೋಷಕರ ಕಾರ್ಯಾಗಾರ ನಡೆಯಲಿದೆ.

'ಅಪಸ್ಮಾರ (ಮೂರ್ಚೆರೋಗ)- ಗಾಬರಿ ಬೇಡ, ಅರಿವಿರಲಿ' ಎಂಬ ವಿಷಯ ಕುರಿತು ಎಸ್. ಎಸ್. ನಾರಾಯಣ ಹೆಲ್ತ್ ಸೆಂಟರ್‌ನ ಡಾ. ವೀರಣ್ಣ ಗಡದ್ ಅವರು ಮಾತನಾಡುವರು.

# ನಗರದಲ್ಲಿ ಇಂದು ಕಲಿಕೆ ಜೊತೆಗೆ ಕೌಶಲ್ಯ ಕಾರ್ಯಾಗಾರ

ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸಂಜೆ ಕಾಲೇಜು ವತಿಯಿಂದ ಕಾಲೇಜಿನ ಸಭಾಂಗಣದಲ್ಲಿ ಇಂದು ಬೆಳಗ್ಗೆ 10.30ಕ್ಕೆ 'ಕಲಿಕೆ ಜೊತೆಗೆ ಕೌಶಲ್ಯ' ಎಂಬ ತರಬೇತಿ ಕಾರ್ಯಾಗಾರ ನಡೆಯಲಿದೆ.

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತ ಜಿ. ಜಗದೀಶ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಕಾ.ಶಿ.ಇ ಪ್ರಾದೇಶಿಕ ಜಂಟಿ ನಿರ್ದೇಶಕ ಕೆ.ಎ. ವಿಷ್ಣುಮೂರ್ತಿ, ದಾವಿವಿ ಕುಲಪತಿ ಬಿ.ಡಿ. ಕುಂಬಾರ್, ಕಾಲೇಜಿನ ಪ್ರಾಚಾರ್ಯ ಬಿ.ಸಿ. ದಾದಾಪೀರ್, ಡಾ.ಸಿ.ಕೆ. ಕೊಟ್ರಪ್ಪ, ಕೌಶಲ್ಯ ಅಭಿವೃದ್ಧಿ ನಿಗಮದ ನಿರ್ವಾಹಕ ವ್ಯವಸ್ಥಾಪಕ ಎಂ. ಜಿತೇಂದ್ರ ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಕಾಲೇಜು ಶಿಕ್ಷಣ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಕೌಶಲ್ಯ ಅಭಿವೃದ್ಧಿ ನಿಗಮದ ಸಹಯೋಗದಲ್ಲಿ ಕಾರ್ಯಕ್ರಮ ನಡೆಯಲಿದೆ.

# ಮಲೇರಿಯಾ ಮುಕ್ತ ಜಿಲ್ಲೆಯನ್ನಾಗಿಸಲು ಶ್ರಮ : ಡಾ.ಕೆ.ಹೆಚ್.ಗಂಗಾಧರ್

ದಾವಣಗೆರೆ, ಮೇ 15 - ಜಿಲ್ಲೆಯನ್ನು ಮಲೇರಿಯಾ ಮುಕ್ತ ಜಿಲ್ಲೆಯನ್ನಾಗಿ ಮಾಡುವ ನಿಟ್ಟಿನಲ್ಲಿ ಜಿಲ್ಲಾ ಆರೋಗ್ಯ ಇಲಾಖೆ ಶ್ರಮಿಸುತ್ತಿದೆ ಎಂದು ಜಿಲ್ಲಾ ಮಲೇರಿಯಾ ಅಧಿಕಾರಿ ಡಾ. ಕೆ.ಎಚ್. ಗಂಗಾಧರ್ ತಿಳಿಸಿದ್ದಾರೆ.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಲೇರಿಯಾ ನಿಯಂತ್ರಿಸುವ ಮತ್ತು ಅಂತಿಮವಾಗಿ ನಿರ್ಮೂಲನೆ ಮಾಡುವ ಉದ್ದೇಶದಿಂದ ಪ್ರತಿ ವರ್ಷ ಏ. 25 ರಂದು ವಿಶ್ವ ಮಲೇರಿಯಾ ದಿನ ಆಚರಿಸಿಕೊಂಡು ಬರಲಾಗುತ್ತಿದೆ ಎಂದು ತಿಳಿಸಿದರು. ರಾಷ್ಟ್ರೀಯ ಡೆಂಗ್ಯೂ ದಿನಾಚರಣೆ ಅಂಗವಾಗಿ ನಾಡಿದ್ದು ದಿನಾಂಕ 17 ರಂದು ಬೆಳಗ್ಗೆ 9.30ಕ್ಕೆ ಚಾಮರಾಜನಗರ ವೃತ್ತದಿಂದ ಬಾಷಾ ನಗರದವರೆಗೆ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಕಾಧಿಕಾರಿ ಡಾ.ಸುರೇಶ್ ಬಿ. ಇಟ್ನಾಳ್ ಸೇರಿದಂತೆ ಇತರರು ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.

ಪ್ರಭಾರ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಡಿ. ಮುರುಳೀಧರ್, ಡಾ. ಸುರೇಶ್ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು

# ಅಡಿಕೆ ಮರ ಕಡಿದಿದ್ದಕ್ಕೆ ಕೊಲೆ: ಇಬ್ಬರ ಬಂಧನ

ದಾವಣಗೆರೆ, ಮೇ 15- ಅಡಿಕೆ ಮರಗಳನ್ನು ಕಡಿದಿದ್ದ ಕೋಪದಿಂದ ಮಹಿಳೆಯನ್ನು ನೇಣು ಬಿಗಿದು ಕೊಲೆ ಮಾಡಿ ಭದ್ರಾ ನಾಲೆಯಲ್ಲಿ ಎಸೆದ್ದಿದ್ದ ಇಬ್ಬರು ಆರೋಪಿಗಳನ್ನು ಬಸವಾಪಟ್ಟಣ ಪೊಲೀಸರು ಬಂಧಿಸಿದ್ದಾರೆ.

ಭದ್ರಾವತಿ ತಾಲ್ಲೂಕಿನ ನಾಗೊಲೆ (ಅರಕೆರೆ ಗೇಟ್) ನಿವಾಸಿ ಎಚ್.ಜಿ. ಕುಮಾರ್, ಅರಕೆರೆ ಗ್ರಾಮದ ಚಿದಾನಂದಪ್ಪ ಬಂಧಿತರು. ಇವರಿಬ್ಬರು ಏ. 20 ರಂದು ಅರಕೆರೆ ಗ್ರಾಮದ ನೇತ್ರಾವತಿ ಎಂಬುವರನ್ನು ತೋಟದಲ್ಲಿ ಕೊಲೆ ಮಾಡಿ, ಭದ್ರಾ ನಾಲೆಯಲ್ಲಿ ಶವವನ್ನು ಎಸೆದಿದ್ದರು.

ಚನ್ನಗಿರಿ ತಾಲ್ಲೂಕಿನ ಕಣಿವೆ ಬಿಳಚಿ ಗ್ರಾಮದ ಬಳಿ ಭದ್ರಾ ನಾಲೆಯಲ್ಲಿ ಮೇ 5ರಂದು ದೇಹ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿತ್ತು. ಕೊರಳಲ್ಲಿ ಹಗ್ಗ ಸುತ್ತಿದ ರೀತಿಯಲ್ಲಿದ್ದು, ಯಾರೋ ಎಲ್ಲಿಯೋ ಕೊಲೆ ಮಾಡಿ ನಾಲೆಗೆ ಹಾಕಿರಬಹುದು ಎಂಬ ಅನುಮಾನದಿಂದ ಬಸವಾಪಟ್ಟಣ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು.

ಶವದ ಗುರುತು ಪತ್ತೆಗಾಗಿ ಜಿಲ್ಲೆಯ ಹಾಗೂ ಅಕ್ಕ ಪಕ್ಕದ ಜಿಲ್ಲೆಗಳ ಕಾಣೆಯಾದ ಪ್ರಕರಣಗಳ ಬಗ್ಗೆ ಪೊಲೀಸರು ಪರಿಶೀಲನೆ ನಡೆಸಿದ್ದರು. ಶಿವಮೊಗ್ಗ ಜಿಲ್ಲೆಯ ಹೊಳೆಹೊನ್ನೂರು ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ನಾಪತ್ತೆ ಪ್ರಕರಣದ ಮಹಿಳೆಯ ಚಹರೆಗೂ ಹಾಗೂ ಅನಾಮಧೇಯ ಶವದ ಚಹರೆಗೂ ಹೋಲಿಕೆ ಕಂಡು ಬಂದಿತ್ತು. ಈ ವೇಳೆ ಹೆಚ್ಚಿನ ವಿಚಾರಣೆ ನಡೆಸಿದಾಗ ಕೊಲೆಯಾದ ಮಹಿಳೆ ಅರಕೆರೆ ಗ್ರಾಮದ 47 ವರ್ಷದ ನೇತ್ರಾವತಿ ಎಂಬುದು ಪತ್ತೆಯಾಯಿತು.

ಎಲ್ಲ ಆಯಾಮಗಳಲ್ಲಿ ತೀವ್ರ ಕಾರ್ಯಾಚರಣೆ ನಡೆಸಿ ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆದು, ವಿಚಾರಣೆ ಮಾಡಿದಾಗ ಕೊಲೆಗೀಡಾದ ನೇತ್ರಾವತಿ ಏ.20 ರಂದು ಜಮೀನಿನಲ್ಲಿ ಅಡಿಕೆ ಗಿಡಗಳನ್ನು ಕಡಿದಿದ್ದರಿಂದ ಕೋಪಗೊಂಡು ಕೊಲೆ ಮಾಡಿದ್ದಾಗಿ ಒಪ್ಪಿಕೊಂಡಿದ್ದಾರೆ. ನಂತರ ಜಮೀನಿನ ಸಮೀಪದ ಭದ್ರಾ ಚಾನಲ್ ನಲ್ಲಿ ಶವವನ್ನು ಹಾಕಿದ್ದಾಗಿ ಆರೋಪಿಗಳು ಹೇಳಿದ್ದಾರೆ. ಇಬ್ಬರನ್ನೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಆರೋಪಿತರ ಬಂಧನದ ಕಾರ್ಯಾಚರಣೆಗೆ ಜಿಲ್ಲಾ ರಕ್ಷಣಾಧಿಕಾರಿ ಉಮಾ ಪ್ರಶಾಂತ್ ಪ್ರಶಂಸಿದ್ದಾರೆ.

# ಪಂಚಮಸಾಲಿ ಸಮಾಜದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ

ದಾವಣಗೆರೆ, ಮೇ 15 - ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಜಿಲ್ಲಾ ಘಟಕದ ವತಿಯಿಂದ 2024ನೇ ಸಾಲಿನಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ಜಿಲ್ಲೆಯ ಪಂಚಮಸಾಲಿ ಸಮಾಜದ ಮಕ್ಕಳಿಗೆ 'ಸ್ವಾಭಿಮಾನ ಪ್ರತಿಭಾ ಪುರಸ್ಕಾರ'ಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

10ನೇ ತರಗತಿಯಲ್ಲಿ ಶೇ.80ರಷ್ಟು ಮತ್ತು ಪಿಯುಸಿಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಗಳಿಸಿದ ಸಮಾಜದ ವಿದ್ಯಾರ್ಥಿಗಳು www.panchamasali.org ನಲ್ಲಿ ಅರ್ಜಿ ಪಡೆದು ಇದೇ ದಿನಾಂಕ 25ರ ಒಳಗಾಗಿ ಸಮಾಜದ ಕಚೇರಿಗೆ ಕಳುಹಿಸಬೇಕು.

ಕಳುಹಿಸಬೇಕಾದ ವಿಳಾಸ: ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜ, ಕಛೇರಿ ನಂ:477, 1ನೇ ಮಹಡಿ, 5ನೇ ಮುಖ್ಯ ರಸ್ತೆ, 7ನೇ ಕ್ರಾಸ್, ಚೇತನಾ ಹೋಟೆಲ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ ಹೆಚ್ಚಿನ ಮಾಹಿತಿಗಾಗಿ ದೂ.ಸಂ 08192-222008 ಸಂಪರ್ಕಿಸಬಹುದು.

## ಓದುಗರ ಪತ್ರ

### ರೈತರನ್ನು ಗೌರವಿಸಿ, ಪ್ರೋತ್ಸಾಹಿಸಿ...

**ಮಾನ್ಯರೇ,**

ಬೆಂಗಳೂರು ಮೆಟ್ರೋದಲ್ಲಿ ಬಟ್ಟೆ ಕೊಳಕಾಗಿವೆ ಎಂಬ ಕಾರಣಕ್ಕೆ ರೈತರಿಬ್ಬರಿಗೆ ಮೆಟ್ರೋ ಪ್ರವೇಶ ನಿರಾಕರಿಸಿದ್ದ ವಿಡಿಯೋ ವೈರಲ್ ಆದ ಬಳಿಕ ಸಾರ್ವಜನಿಕರ ಆಕ್ರೋಶಕ್ಕೂ ತುತ್ತಾಗಿತ್ತು. ಅದರಂತೆಯೇ ಇನ್ನೊಂದು ವಿಡಿಯೋದಲ್ಲಿ, ಒಬ್ಬ ಮುಗ್ಧ ರೈತರೊಬ್ಬರಿಗೆ ಇ-ಕೆವೈಸಿ ಮಾಡಿಸಲು ಆಧಾರ್ ಲಿಂಕ್ ಇರೋ ಫೋನ್ ತಗೊಂಡು ಬಾ ಎಂದರೆ ಲ್ಯಾಂಡ್ ಲೈನ್ ಫೋನ್ ತಂದ ವಿಡಿಯೋ ಕೂಡ ವೈರಲ್ ಆಗಿತ್ತು. ಈ ಎರಡೂ ವಿಡಿಯೋಗಳಿಗೂ ಒಂದಕ್ಕೊಂದು ಸಾಮ್ಯತೆ ಇದ್ದರೂ ಕೂಡ ಸಂದರ್ಭ ಮಾತ್ರ ಬೇರೆ ಬೇರೆ.

ಇತ್ತೀಚಿನ ದಿನಗಳಲ್ಲಿ ಮುಗ್ಧ ಅನಕ್ಷರಸ್ಥ ರೈತರನ್ನು ಅವಮಾನಿಸಿ, ವಿಕೃತ ಆನಂದ ಪಡುತ್ತಿರುವ ವಿದ್ಯಾವಂತರ ಮಾನಸಿಕ ಸ್ಥಿತಿಯನ್ನು ತೋರಿಸುತ್ತದೆ. ರೈತ ದೇಶದ ಬೆನ್ನೆಲುಬು. ಅವರು ಬೆಳೆದಿರುವ ಅನ್ನವನ್ನೇ ತಿಂದು ಅವಮಾನಿಸುವವರಿಗೆ ನನ್ನದೊಂದು ಧಿಕ್ಕಾರವಿರಲಿ. ಎಸಿ ರೂಮಲ್ಲಿ ಕೆಲಸ ಮಾಡಿದಷ್ಟು ಸುಲಭವಲ್ಲ ರೈತರ ಕೆಲಸ. ಕನಿಷ್ಠ ಮಾನವೀಯ ಮೌಲ್ಯ, ಸಾಮಾಜಿಕ ಕಳಕಳಿ ಇಲ್ಲದಿದ್ದ ಮೇಲೆ ಎಷ್ಟೇ ಪದವಿ ಪಡೆದರೂ ವ್ಯರ್ಥವೇ. ರೈತರನ್ನು ಗೌರವಿಸಿ, ಪ್ರೋತ್ಸಾಹಿಸಿ, ಬೆಂಬಲಿಸೋಣ.

**ಮುರುಗೇಶ ಡಿ, ದಾವಣಗೆರೆ.**

# ಭಾರತ ವಿಕಾಸ ಪರಿಷದ್ ಪದಗ್ರಹಣ, ಕುಟುಂಬ ಮಿಲನ

ದಾವಣಗೆರೆ, ಮೇ 15 - ಭಾರತ ವಿಕಾಸ ಪರಿಷದ್ ಸ್ವಾಮಿ ವಿವೇಕಾನಂದ ಶಾಖೆ ವತಿಯಿಂದ 2024-25ನೇ ಸಾಲಿನ ಪದಗ್ರಹಣ ಹಾಗೂ ಕುಟುಂಬ ಮಿಲನ ಕಾರ್ಯಕ್ರಮವನ್ನು ಇಲ್ಲಿನ ರೋಟರಿ ಬಾಲಭವನದಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಶಾಖೆಯ ಅಧ್ಯಕ್ಷ ಮೌನೇಶಪ್ಪ ಎನ್.ಪಿ. ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸೇವಾ ವಿಭಾಗದ ರಾಷ್ಟ್ರೀಯ ವೈಸ್ ಛೇರ್ಮನ್ ಬಿ.ಕೆ. ತಿಪ್ಪೇಸ್ವಾಮಿ, ರಾಷ್ಟ್ರೀಯ ಸಮೂಹ ಗಾಯನ ಸ್ಪರ್ಧೆಯ ರಾಷ್ಟ್ರೀಯ ಯೋಜನಾ ಸದಸ್ಯರಾದ ಮೋಹನ್ ಶ್ರೀಗಿರಿಪುರ ಮತ್ತು ಮಾಗನೂರು ಬಸಪ್ಪ ಪಿಯು ಕಾಲೇಜಿನ ಪ್ರಾಂಶುಪಾಲ ಡಾ. ಎಸ್. ಪ್ರಸಾದ್ ಬಂಗೇರ, ನಿಕಟಪೂರ್ವ ಅಧ್ಯಕ್ಷ ಎಲ್.ವಿ. ನಾಗಾನಂದ, ಕಾರ್ಯದರ್ಶಿ ಕೆ. ಶಿವಶಂಕರಪ್ಪ, ಕೋಶಾಧ್ಯಕ್ಷ ಎ. ನಾಗರಾಜ ರಾವ್ ಉಪಸ್ಥಿತರಿದ್ದರು.



# ಅಂಡರ್‌ಗ್ರೌಂಡ್ ವಿದ್ಯುತ್ ಕೇಬಲ್ ಅಳವಡಿಕೆ ಭೂಗತ ಕೆಲಸಗಳಿಗೆ ಬೆಸ್ಕಾಂ ಅನುಮತಿ ಕಡ್ಡಾಯ

ದಾವಣಗೆರೆ, ಮೇ 15 - ಬೆಸ್ಕಾಂ ನಗರ ಉಪವಿಭಾಗ-1ರ ವ್ಯಾಪ್ತಿಯಲ್ಲಿನ ದಾವಣಗೆರೆ 66/11 ಕೆ.ವಿ ವಿದ್ಯುತ್ ಉಪಕೇಂದ್ರದಿಂದ ಹಾದು ಬರುವ ಎಫ್-13 ತ್ರಿಶೂಲ್ ಮತ್ತು ಎಫ್-8 ಕೆ.ಟಿ. ಜೆ. 11 ಕೆ.ವಿ ವಿದ್ಯುತ್ ಮಾರ್ಗವನ್ನು ಓವರ್ ಹೆಡ್ ಮಾರ್ಗದಿಂದ ಭೂಗತ ಕೇಬಲ್ ಆಗಿ ಪರಿವರ್ತಿಸಿ, ಚಾಲನೆಗೊಳಿಸಲಾಗಿದೆ.

**11 ಕೆ.ವಿ ಮಾರ್ಗಗಳ ಭೂಗತ ಕೇಬಲ್ ಹಾದು ಹೋಗಿರುವ ಸ್ಥಳದ ವಿವರಗಳು :** ಲಾಯರ್‌ರಸ್ತೆ, ದೀಕ್ಷಿತ್‌ರಸ್ತೆ, ಬಿಲಾಲ್ ಕಾಂಪೌಂಡ್, ಪಿ.ಬಿ. ರಸ್ತೆಯ, ಗಾಂಧಿ ಸರ್ಕಲ್‌ನಿಂದ ಈರುಳ್ಳಿ ಮಾರ್ಕೆಟ್‌ವರೆಗೆ ನಾಯ್ಡು ಹೋಟೆಲ್ ಪ್ರೆಸ್ ಕ್ಲಬ್, ಹಳೇ ಜನತಾವಾಣಿ ಆಫೀಸ್, ರಾಘವೇಂದ್ರ ಸ್ವಾಮಿ ದೇವಸ್ಥಾನ, ಲಾಯರ್ ರಸ್ತೆ, ಕೆ.ಟಿ.ಜೆ ನಗರ 1 ರಿಂದ 17ನೇ ಕ್ರಾಸ್, ಡಾಂಗೆ ಪಾರ್ಕ್, ಭಗತ್‌ಸಿಂಗ್ ನಗರ, ಡಿ.ಸಿ.ಎಂ. ರಸ್ತೆ, ಕೆ.ಬಿ. ಬಡಾವಣೆ, ತ್ರಿಶೂಲ್ ಚಿತ್ರಮಂದಿರ ರಸ್ತೆ, ಕಾವೇರಮ್ಮ ಸ್ಕೂಲ್, ಸಿದ್ದಮ್ಮ ಪಾರ್ಕ್ ರಸ್ತೆ, ಶಿವಪ್ಪ ಸರ್ಕಲ್, ಮುರುಘಾ ರಾಜೇಂದ್ರ ಮಳಿಗೆ, ಹದಡಿರಸ್ತೆ, ಹಳೆ ಬೆಸ್ಕಾಂ ಆಫೀಸ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು.

ಈ ಪ್ರದೇಶಗಳಲ್ಲಿ ಯಾವುದೇ ರೀತಿಯ ಭೂಗತ ಕೆಲಸಗಳನ್ನು ಕೈಗೊಳ್ಳುವವರು ಬೆಸ್ಕಾಂನಿಂದ ಕಡ್ಡಾಯವಾಗಿ ನಿರಾಕ್ಷೇಪಣಾ ಪತ್ರ ಪಡೆಯುವುದು ಅಗತ್ಯ ಮತ್ತು ಬೆಸ್ಕಾಂ ಕಚೇರಿಗೆ ಮುಂಚಿತವಾಗಿ ಮಾಹಿತಿ ನೀಡದೇ ಭೂಗತ ಕೆಲಸ ನಿರ್ವಹಿಸುವ ಸಂದರ್ಭದಲ್ಲಿ ಬೆಸ್ಕಾಂ ಕಂಪನಿ ಅಥವಾ ಸಾರ್ವಜನಿಕರ ಆಸ್ತಿ ಅಥವಾ ಯಾವುದೇ ರೀತಿಯ ಪ್ರಾಣಹಾನಿ ತೊಂದರೆ, ನಷ್ಟ ಉಂಟಾದಲ್ಲಿ ಕೆಲಸ ನಿರ್ವಹಿಸಿದವರೇ ನೇರ ಜವಾಬ್ದಾರಿ ಆಗಿರುತ್ತಾರೆ. ಹಾಗೂ ನಷ್ಟವನ್ನು ಅವರೇ ಬರಿಸಬೇಕಾಗಿರುತ್ತದೆ.

ಕೆಲಸ ನಿರ್ವಹಿಸುವ ಸಮಯದಲ್ಲಿ ಈ ಭೂಗತ ಕೇಬಲ್ ಹಾನಿಗೊಳಗಾಗಿ ವಿದ್ಯುತ್ ಅಡಚಣೆಯಾಗಿ ಅದರಿಂದ ಉಂಟಾಗುವ ಆರ್ಥಿಕ ನಷ್ಟವನ್ನೂ ಸಹ ಕೆಲಸ ನಿರ್ವಹಿಸಿದವರೆ ಭರಿಸಬೇಕೆಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

# ದೂಡಾ ಎಇಇ ಶ್ರೀಕರ್ ನಿವೃತ್ತಿ, ಬೀಳ್ಕೊಡುಗೆ



ದಾವಣಗೆರೆ, ಮೇ 15- ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಸಹಾಯಕ ಕಾರ್ಯಪಾಲಕ ಅಭಿಯಂತರ ಕೆ.ಹೆಚ್. ಶ್ರೀಕರ್ ಅವರು ತಮ್ಮ ಸೇವೆಯಿಂದ ಕಳೆದ ವಾರ ನಿವೃತ್ತರಾದರು.

ನಗರ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ದಿ. ಹೆಚ್.ಡಿ. ಹನುಮಂತಪ್ಪ ಮತ್ತು ನಗರಸಭೆ ಮಾಜಿ ಸದಸ್ಯರಾಗಿದ್ದ ಶ್ರೀಮತಿ ಬಸಮ್ಮ ದಂಪತಿ ಪುತ್ರರಾಗಿರುವ ಶ್ರೀಕರ್, ಡಿಪ್ಲೋಮಾ ಇನ್ ಸಿವಿಲ್ ಇಂಜಿನಿಯರಿಂಗ್ ಪದವೀಧರರಾಗಿದ್ದು, ದೂಡಾ ಎಇಇ ಆಗಿ ಸುದೀರ್ಘ 41 ವರ್ಷಗಳ ಕಾರ್ಯ ನಿರ್ವಹಿಸಿದ್ದಾರೆ.

**ಬೀಳ್ಕೊಡುಗೆ :** ಸೇವೆಯಿಂದ ನಿವೃತ್ತರಾದ ಶ್ರೀಕರ್ ಅವರನ್ನು ದೂಡಾ ವತಿಯಿಂದ ದೂಡಾ ಕಛೇರಿಯ ಸಭಾಂಗಣದಲ್ಲಿ ಇಂದು ಸಂಜೆ ಏರ್ಪಾಡಾಗಿದ್ದ ಸಮಾರಂಭದಲ್ಲಿ ಬೀಳ್ಕೊಡಲಾಯಿತು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ದೂಡಾ ಆಯುಕ್ತ ಮಹೇಶ್ ಬಾಬು ಅವರು ಶ್ರೀಕರ್ ಅವರನ್ನು ಶಾಲು ಹೊದಿಸಿ, ಸನ್ಮಾನಿಸಿ, ಗೌರವಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಹೇಶ್ ಬಾಬು, ನಗರದ ಪ್ರತಿಷ್ಠಿತ ಬಡಾವಣೆಗಳಾದ ಶ್ರೀ ಎಸ್. ನಿಜಲಿಂಗಪ್ಪ ಬಡಾವಣೆ, ಸರ್ ಮಿರ್ಜಾ ಇಸ್ಮಾಯಿಲ್ ನಗರ ಬಡಾವಣೆ, ಶ್ರೀ ಮಹಮ್ಮದಾಲಿ ಜೋಹರ್ ನಗರ ಬಡಾವಣೆ ಮತ್ತು ಜೆ.ಹೆಚ್. ಪಟೇಲ್ ಬಡಾವಣೆಗಳ ನಿರ್ಮಾಣ ಕಾರ್ಯದಲ್ಲಿ ಶ್ರೀಕರ್ ವಹಿಸಿದ್ದ ಮಹತ್ತರ ಪಾತ್ರ ಸ್ಮರಣೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವಿವಿಧ ಬಡಾವಣೆಗಳಲ್ಲಿ ಅಲಂಕಾರಿಕ ದೀಪಗಳು ಹಾಗೂ ಜೆ.ಹೆಚ್. ಪಟೇಲ್ ಬಡಾವಣೆಯ ರಸ್ತೆಗಳ ಬದಿಯಲ್ಲಿ ಗಿಡಗಳನ್ನು ನೆಟ್ಟು, ಅವುಗಳನ್ನು ಸುಂದರವಾಗಿ ಬೆಳೆಸುವುದರಲ್ಲಿ ಶ್ರೀಕರ್ ಸಲ್ಲಿಸಿದ್ದ ಸೇವೆ ಶ್ಲಾಘನೀಯ ಎಂದರು.

ಅಲ್ಲದೇ, ತಮ್ಮ ಸೇವಾವಧಿಯಲ್ಲಿ ಶ್ರೀ ಡಿ. ದೇವರಾಜ ಅರಸು ಬಡಾವಣೆ ಎ ಬ್ಲಾಕ್‌ನಲ್ಲಿ ಮೇಲ್ಸೇತುವೆ ನಿರ್ಮಾಣ ಮತ್ತು ನಗರದ ನಾಗರಿಕರಿಗೆ ಕುಡಿಯುವ ನೀರೊದಗಿಸುವ ಟಿವಿ ಸ್ಟೇಷನ್ ಕೆರೆ ಅಭಿವೃದ್ಧಿಯಲ್ಲೂ ಶ್ರೀಕರ್ ಶ್ರಮಿಸಿದ್ದಾರೆ ಎಂದು ಮಹೇಶ್ ಬಾಬು ಹೇಳಿದರು.

ದೂಡಾ ಸಹಾಯಕ ಕಾರ್ಯಪಾಲಕ ಅಭಿಯಂತರ ಸುಜಯ್ ಕುಮಾರ್, ಕಿರಿಯ ಅಭಿಯಂತರರಾದ ಅಕ್ಷತಾ, ಸರ್ವೇಯರ್ ಲೋಕೇಶ್ ಕುಮಾರ್, ವ್ಯವಸ್ಥಾಪಕ ಪ್ರಭು, ಪ್ರಥಮ ದರ್ಜೆ ಸಹಾಯಕರಾದ ಸುನೀತಾ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ನಗರದಲ್ಲಿ ವಿಶ್ವ ಹಿಮೊಫಿಲಿಯಾ ದಿನಾಚರಣೆ




ದಾವಣಗೆರೆ, ಮೇ 15 - ನಗರದ ಹಿಮೊಫಿಲಿಯಾ ಸೊಸೈಟಿಯಲ್ಲಿ ಕಳೆದ ವಾರ ವಿಶ್ವ ಹಿಮೊಫಿಲಿಯಾ ದಿನ ಆಚರಿಸಲಾಯಿತು.

ಪಾರಿವಾಳ ಹಾರಿಸುವ ಮೂಲಕ 'ವಿಶ್ವ ಹಿಮೊ ಫಿಲಿಯಾ ದಿನಾಚರಣೆ'ಗೆ ಸಾಂಕೇತಿಕ ಚಾಲನೆ ನೀಡಲಾಯಿತು. ವೇದಿಕೆ ಕಾರ್ಯಕ್ರಮವನ್ನು ಸುಕ್ಷೇಮ ಆಸ್ಪತ್ರೆಯ ನಿರ್ದೇಶಕ ಡಾ. ಶ್ರೀಶೈಲ ಎಂ. ಬ್ಯಾಡಗಿ ಉದ್ಘಾಟಿಸಿದರು. ಸಂಸ್ಥೆಯ ಅಧ್ಯಕ್ಷ ಡಾ. ಸುರೇಶ್ ಹನಗವಾಡಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ವೇಳೆ ಸಂಸ್ಥೆಯ ಗೌರವಾಧ್ಯಕ್ಷರಾದ ಶ್ರೀಮತಿ ಕಿರುವಾಡಿ ಗಿರಿಜಮ್ಮ, ಲೈಫ್ ಲೈನ್ ರಕ್ತ ನಿಧಿ ಕೇಂದ್ರದ ವೈದ್ಯಾಧಿಕಾರಿ ಡಾ.ಎಂ.ಎಂ. ದೊಡ್ಡಿಕೊಪ್ಪದ್, ಕಾರ್ಯ ನಿರ್ವಾಹಕ ನಿರ್ದೇಶಕ ಡಾ. ಸದಾಶಿವಪ್ಪ, ಸೊಸೈಟಿಯ ಮಹಿಳಾ ವಿಭಾಗದ ಅಧ್ಯಕ್ಷರಾದ ಡಾ. ಮೀರಾ ಹನಗವಾಡಿ ಮತ್ತು ಸಂಸ್ಥೆಯ ಸಿಬ್ಬಂದಿಗಳಿದ್ದರು.

# ಪುಷ್ಪ ಶಾಮನೂರು ಮಹಾಲಿಂಗಪ್ಪ ಶಾಲೆಗೆ ಶೇ.100 ಫಲಿತಾಂಶ





ದಾವಣಗೆರೆ, ಮೇ 15 - ನಗರದ ಶ್ರೀಮತಿ ಪುಷ್ಪ ಶಾಮನೂರು ಮಹಾಲಿಂಗಪ್ಪ ಐಸಿಎಸ್‌ಇ ಶಾಲೆಯ 2023-24ನೇ ಸಾಲಿನ 10ನೇ ತರಗತಿ ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ ಲಭಿಸಿದೆ.

ಶಾಲೆಯ ಒಟ್ಟು 18 ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಂಡಿದ್ದು, ಅದರಲ್ಲಿ 09 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, 09 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ.

ಚಂದನ್ ಎಸ್ ಶೇ.93.2, ಜವೇರಿಯ ಮುನಾಜಿಮ್ ಶೇ.93, ಅಕ್ಷರ ಎಂ.ಡಿ ಶೇ.92.8 ಅಂಕಗಳನ್ನು ಗಳಿಸಿ ಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಗಳಿಸಿ ಶಾಲೆಗೆ ಕೀರ್ತಿ ತಂದಿದ್ದಾರೆ. ಎಲ್ಲಾ ವಿದ್ಯಾರ್ಥಿಗಳನ್ನು ಶಾಲೆಯ ಪ್ರಾಂಶುಪಾಲರು, ಬೋಧಕ ವರ್ಗದವರು ಮತ್ತು ಸಂಸ್ಥೆಯ ಆಡಳಿತ ಮಂಡಳಿಯವರು ಅಭಿನಂದಿಸಿದ್ದಾರೆ.

# ಮಲೇಬೆನ್ನೂರು ಸುತ್ತಮುತ್ತ ಮಳೆ



ಮಲೇಬೆನ್ನೂರು, ಮೇ 15- ಬುಧವಾರ ಸಂಜೆ ಮಲೇಬೆನ್ನೂರು ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಸಾಧಾರಣ ಮಳೆಯಾಗಿದ್ದು, ಬಿಸಿಲಿನ ಬೇಗೆಗೆ ತಂಪೆರೆದಂತಾಗಿದೆ. ಈ ಮಳೆ ತೋಟಗಳಿಗೆ ಸ್ವಲ್ಪ ಮಟ್ಟಿಗೆ ಆಸರೆಯಾಗಿದ್ದು, ಒಮ್ಮೆ ಹದ ಮಳೆ ಸುರಿದರೆ ಭೂಮಿ ತಂಪಾಗಲಿದೆ ಎಂಬುದು ರೈತರ ಆಶಯವಾಗಿದೆ. ಮಿಟ್ಲಕಟ್ಟೆ, ಜರೇಕಟ್ಟೆ, ದೇವರಬೆಳಕೆರೆಯಲ್ಲಿ ತುಸು ಹೆಚ್ಚು ಮಳೆ ಆಗಿದೆ.

# ಅಂತರ್ಜಲ ಬಳಕೆಗೆ ಎನ್.ಓ.ಸಿ.ಕಡ್ಡಾಯ

ದಾವಣಗೆರೆ, ಮೇ 15- ಜಿಲ್ಲೆಯಲ್ಲಿ ಪ್ರಸ್ತುತ ಇರುವ ಹಾಗೂ ಹೊಸದಾಗಿ ಪ್ರಾರಂಭಿಸುವ ಕೈಗಾರಿಕೆ, ವಾಣಿಜ್ಯ, ಮೂಲ ಸೌಕರ್ಯ ಅಭಿವೃದ್ಧಿ, ಗಣಿಗಾರಿಕೆ, ಮನರಂಜನೆ ಯೋಜನೆಗಳಿಗೆ ಅಂತರ್ಜಲ ಬಳಕೆದಾರರು ಕಡ್ಡಾಯವಾಗಿ ನಿರಾಕ್ಷೇಪಣಾ ಪತ್ರ (ಎನ್‌ಓಸಿ) ಪಡೆಯಬೇಕು.

ಅಂತರ್ಜಲ ಬಳಕೆದಾರರು ಕರ್ನಾಟಕ ಅಂತರ್ಜಲ ಪ್ರಾಧಿಕಾರದಿಂದ ಕಡ್ಡಾಯವಾಗಿ ನಿರಾಕ್ಷೇಪಣಾ ಪತ್ರವನ್ನು(ಎನ್‌ಓಸಿ) ಪಡೆಯಬೇಕಾಗಿರುತ್ತದೆ. ಆದ್ದರಿಂದ ಸಂಬಂಧಪಟ್ಟ ಎಲ್ಲಾ ಅಂತರ್ಜಲ ಬಳಕೆದಾರರು ನಿರಾಕ್ಷೇಪಣಾ ಪತ್ರ ಪಡೆಯಲು http://karnataka.gov.in/ ವೆಬ್‌ಸೈಟ್‌ನಲ್ಲಿ ಸಲ್ಲಿಸಲು ಅವಕಾಶವಿರುತ್ತದೆ. ಈ ಹಿನ್ನಲೆಯಲ್ಲಿ ದಾವಣಗೆರೆ ಜಿಲ್ಲೆಯಾದ್ಯಾದಂತ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಮತ್ತು ಹೊಸದಾಗಿ ಪ್ರಾರಂಭಿಸುವ ಕೈಗಾರಿಕೆ, ವಾಣಿಜ್ಯ, ಗಣಿಗಾರಿಕೆ, ಮನರಂಜನೆ, ಮೂಲಭೂತ ಸೌಕರ್ಯ ಉದ್ದೇಶಕ್ಕಾಗಿ ಅಂತರ್ಜಲವನ್ನು ಬಳಸುವವರು ಕಡ್ಡಾಯ ನಿರಾಕ್ಷೇಪಣಾ ಪತ್ರವನ್ನು (ಎನ್‌ಓಸಿ) ಪಡೆಯಬೇಕು ಎಂದು ಕ.ರಾ.ಮಾ.ನಿ ಮಂಡಳಿ ಪರಿಸರ ಅಧಿಕಾರಿ ಲಕ್ಷ್ಮಿಕಾಂತ್ ತಿಳಿಸಿದ್ದಾರೆ.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎ.ವಿ.ಕೆ ಕಾಲೇಜ್ ರಸ್ತೆ, ರತ್ನಮ್ಮ ಮಹಿಳಾ ಹಾಸ್ಟೆಲ್, ಸೀತಮ್ಮ ಕಾಲೇಜು ಮತ್ತು ಬಡಾವಣೆ ಪೊಲೀಸ್ ಠಾಣೆ, ಹದಡಿ ರೋಡ್, ನಿಟುವಳ್ಳಿ, ನಿಟುವಳ್ಳಿ ಹೊಸಬಡಾವಣೆ, ದುರ್ಗಾಂಬಿಕ ದೇವಸ್ಥಾನ, 60 ಅಡಿ ರಸ್ತೆ, ಪಿ.ಬಿ.ರೋಡ್, ರಿಲಯನ್ಸ್ ಮಾರ್ಕೆಟ್, ಸುಲ್ತಾನ್ ಡೈಮೈಂಡ್ಸ್, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ಡೆಂಟಲ್ ಕಾಲೇಜು ರಸ್ತೆ, ಮ್ಯಾಕ್ಸ್, ಕೆಎಸ್‌ಪಿ, ಕಡ್ಲಿ ಬಿಲ್ಡಿಂಗ್, ಬಿಎಸ್‌ಸಿ, ಎಆರ್‌ಜಿ ಕಾಲೇಜ್, ನಿಜಲಿಂಗಪ್ಪ ಬಡಾವಣೆ, ರಿಂಗ್‌ರೋಡ್, ಕುಂದವಾಡ ರಸ್ತೆ, ಯಲ್ಲಮ್ಮ ನಗರ, ವಿನೋಬನಗರ 4ನೇ ಮೇನ್, 3ನೇ ಮೇನ್, ಇ.ಎಸ್.ಐ ಆಸ್ಪತ್ರೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಂ.ಬಿ ಕೇರಿ, ಹೊಂಡದ ಸರ್ಕಲ್ ಸುತ್ತಮುತ್ತ, ಕಾಯಿಪೇಟೆ, ಜಾಲಿನಗರ, ಟೀಚರ್ ಕಾಲೋನಿ, ಶಿವಾಜಿ ನಗರ, ಶಿವಾಜಿ ಸರ್ಕಲ್, ಛಲವಾದಿ ಕೇರಿ, ಇಡಬ್ಲ್ಯೂಎಸ್ ಕಾಲೋನಿ, ಹಳೇಪೇಟೆ, ಬಾರ್‌ಲೈನ್‌ರಸ್ತೆ ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಪ್ರಥಮ ವರ್ಷದ ಪುಣ್ಯಸ್ಮರಣೆ



**ದಿ|| ಎಲ್.ಜಿ. ಅಮೃತಪ್ಪನವರು**

(ಶ್ರೀ ಭಾಗ್ಯಲಕ್ಷ್ಮಿ ಕಮರ್ಷಿಯಲ್ಸ್, APMC ದಾವಣಗೆರೆ)

ನೀವು ನಮ್ಮನ್ನಗಲಿ ಇಂದಿಗೆ (16.5.2024) ಒಂದು ವರ್ಷವಾಯಿತು. ಸದಾ ನಿಮ್ಮ ಸ್ಮರಣೆಯಲ್ಲಿದ್ದು, ನಿಮ್ಮ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ

ಧರ್ಮಪತ್ನಿ : ಶ್ರೀಮತಿ ಎಲ್. ಶಾರದಮ್ಮ

ಪುತ್ರರಾದ: ಎಲ್.ಎ. ವೀರೇಶ್ ಮತ್ತು ಎಲ್.ಎ. ವಿಜಯಕುಮಾರ್ ಮತ್ತು ಸೊಸೆಯಂದಿರು, ಅಳಿಯಂದಿರು, ಮಕ್ಕಳು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.


## ಅಭಿನಂದನೆಗಳು



ನಮ್ಮ ಪ್ರೀತಿಯ ಮಗ ಪ್ರೀತಮ್.ಕೆ

ಇವನ ಗಮನಾರ್ಹ ಸಾಧನೆಯನ್ನು ವ್ಯಕ್ತಪಡಿಸಲು ನಾವು ನಂಬಲಾಗದಷ್ಟು ಹೆಮ್ಮೆಪಡುತ್ತೇವೆ ಇವನ ಸಮರ್ಪಣೆ ಮತ್ತು ಕಠಿಣ ಪರಿಶ್ರಮವು ಇವನಿಗೆ ಈ ಅರ್ಹವಾದ ಯಶಸ್ಸನ್ನು ತಂದುಕೊಟ್ಟಿದೆ ಮತ್ತು ಈ ಸಂತೋಷದಾಯಕ ಕ್ಷಣವನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ನಾವು ಉತ್ಸುಕರಾಗಿದ್ದೇವೆ ಹಾಗೂ ನಿಕ್ಷ ಈ ಅತ್ಯುತ್ತಮ ಸಾಧನೆಗಾಗಿ ಅಭಿನಂದನೆಗಳು.

94% ದಾವಣಗೆರೆಯ ವಿಶ್ವಚೇತನ ವಿದ್ಯಾನಿಕೇತನ ಆಂಗ್ಲ ಮಾಧ್ಯಮ ಶಾಲೆಯಲ್ಲಿ 2024 ರ 10 ನೇ ಸಿಬಿಎಸ್‌ಸಿ ಪರೀಕ್ಷೆಗಳಲ್ಲಿ ಶಾಲೆಯ ಎರಡನೇ ಟಾಪರ್ ಮತ್ತು ಮೂರು ವಿಷಯಗಳಲ್ಲಿ ಟಾಪರ್!

ನಮ್ಮೆಲ್ಲರ ಪ್ರೀತಿ ಮತ್ತು ಆಶೀರ್ವಾದಗಳೊಂದಿಗೆ,

ಶ್ರೀ ಜಿ ಕೃಷ್ಣಪ್ಪ ಮತ್ತು ಶ್ರೀಮತಿ ಸವಿತಾ ಕೆ ಮತ್ತು ಕುಟುಂಬ ಸದಸ್ಯರು.


## ವಿನಯ್ ಇ.ಎಸ್. ನಿಧನ



ದಾವಣಗೆರೆ ಸಿಟಿ ಬಸವೇಶ್ವರ ಬಡಾವಣೆ ನಿವಾಸಿ

**ಶ್ರೀ ವಿನಯ್ ಇ.ಎಸ್.** (46 ವರ್ಷ)

ಗ್ರಂಥ ಪಾಲಕರು, ಬಾಪೂಜಿ ವಿದ್ಯಾಸಂಸ್ಥೆ, ದಾವಣಗೆರೆ ಇವರು ದಿ.15.05.2024 ರಂದು ನಿಧನರಾಗಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರು ಧರ್ಮಪತ್ನಿ, ಓರ್ವ ಪುತ್ರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ದಿ.16.05.2024 ರಂದು ಮಧ್ಯಾಹ್ನ 12 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ (ಗ್ಲಾಸ್ ಹೌಸ್ ಹತ್ತಿರ) ನೆರವೇರಲಿದೆ.

ಇಂತಿ ದುಃಖ ತಪ್ತರು : ತಂದೆ : ಈಚಘಟ್ಟದ ಶ್ರೀ ಸಿದ್ಧವೀರಪ್ಪ, ತಾಯಿ: ಶ್ರೀಮತಿ ಜಯಶೀಲಾ ಸಿದ್ಧವೀರಪ್ಪ, ಪತ್ನಿ : ಪ್ರತಿಭಾ ವಿನಯ್ ಮಗ: ಜಯಂತ್, ಸಹೋದರರು : ಶ್ರೀಮತಿ ಸುನೀತ ವಿಶ್ವಾಸ್, ಪ್ರತೀಕ್, ಶ್ರೀಮತಿ ಪೂರ್ಣಿಮ ದೀಪಕ್, ಲಕ್ಷ್ಮೀ ಮತ್ತು ಈಚಘಟ್ಟದ ವಂಶಸ್ಥರು ಹಾಗೂ ಕುಟುಂಬ ವರ್ಗ ಮತ್ತು ಅಪಾರ-ಬಳಗದವರು, ದಾವಣಗೆರೆ.

ಮೊ: 88844 44119, 87624 28694






KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas